سورة يونس مكية — اياتها ١٠٩ — ركوعاتها ١١

10. ಯೂನುಸ್

ಸೂ. 109 — ರು. 11

(ಅವತೀರ್ಣ - ಮಕ್ಕಾದಲ್ಲಿ)

بِسْمِ اللهِ الرَّحْمٰنِ الرَّحِيْمِ

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

الٓرٰ تِلْكَ اٰيٰتُ الْكِتٰبِ الْحَكِيْمِ ①

1. ಅಲಿಫ್ ಲಾಮ್ ರಾ, ಇವು ಯುಕ್ತಿಪೂರ್ಣವೂ ನೀತಿಬೋಧಕವೂ ಆಗಿರುವ ಗ್ರಂಥದ ಸೂಕ್ತಗಳು.

اَكَانَ لِلنَّاسِ عَجَبًا اَنْ اَوْحَيْنَآ اِلٰى
رَجُلٍ مِّنْهُمْ اَنْ اَنْذِرِ النَّاسَ وَبَشِّرِ
الَّذِيْنَ اٰمَنُوْٓا اَنَّ لَهُمْ قَدَمَ صِدْقٍ
عِنْدَ رَبِّهِمْ ؕ قَالَ الْكٰفِرُوْنَ اِنَّ هٰذَا
لَسٰحِرٌ مُّبِيْنٌ ②

2. ನಾವು (ಅನಾಸ್ಥೆಯಿಂದಿರುವ) ಜನರಿಗೆ ಎಚ್ಚರಿಕೆ ನೀಡಲಿಕ್ಕೂ ಸತ್ಯವಿಶ್ವಾಸಿಗಳಿಗೆ ಅವರ ಪ್ರಭುವಿನ ಬಳಿ ನಿಜವಾದ ಗೌರವಾದರಗಳಿವೆ ಎಂಬ ಸುವಾರ್ತೆ ನೀಡಲಿಕ್ಕೂ ಸ್ವತಃ ಅವರೊಳಗಿಂದಲೇ ಓರ್ವ ಮನುಷ್ಯನ ಮೇಲೆ 'ದಿವ್ಯವಾಣಿ'ಯನ್ನು ಕಳುಹಿಸಿರುವುದು ಜನರಿಗೆ ಆಶ್ಚರ್ಯದ ವಿಷಯವಾಯಿತೇ? (ಇಷ್ಟು ಮಾತ್ರಕ್ಕಾಗಿ) 'ಈತನು ಮಾಟಗಾರ' ಎಂದು ಸತ್ಯನಿಷೇಧಿಗಳು ಹೇಳಿದರು.[1]

اِنَّ رَبَّكُمُ اللهُ الَّذِيْ خَلَقَ السَّمٰوٰتِ
وَالْاَرْضَ فِيْ سِتَّةِ اَيَّامٍ ثُمَّ اسْتَوٰى
عَلَى الْعَرْشِ يُدَبِّرُ الْاَمْرَ ؕ مَا مِنْ شَفِيْعٍ
اِلَّا مِنْۢ بَعْدِ اِذْنِهٖ ؕ ذٰلِكُمُ اللهُ رَبُّكُمْ
فَاعْبُدُوْهُ ؕ اَفَلَا تَذَكَّرُوْنَ ③

3. ವಾಸ್ತವದಲ್ಲಿ ಆಕಾಶಗಳನ್ನೂ ಭೂಮಿಯನ್ನೂ ಆರು ದಿನಗಳಲ್ಲಿ ಸೃಷ್ಟಿಸಿದ, ಅನಂತರ ವಿಶ್ವ ಸಿಂಹಾಸನದಲ್ಲಿ ವಿರಾಜಿಸಿ ವಿಶ್ವಾಡಳಿತ ನಡೆಸುತ್ತಿರುವ ಅಲ್ಲಾಹನೇ ನಿಮ್ಮ ಪ್ರಭು. ಅವನ ಅನುಮತಿ ದೊರೆತ ಬಳಿಕವೇ ವಿನಾ ಯಾರೂ 'ಶಿಫಾರಸು' ಮಾಡುವವರಿಲ್ಲ. ಈ ಅಲ್ಲಾಹನೇ ನಿಮ್ಮ ಪ್ರಭು. ಆದುದರಿಂದ ನೀವು ಅವನ ದಾಸ್ಯ-ಆರಾಧನೆಯನ್ನೇ ಮಾಡಿರಿ ಮತ್ತೂ ನೀವು ಎಚ್ಚರಗೊಳ್ಳುವುದಿಲ್ಲವೇ?

اِلَيْهِ مَرْجِعُكُمْ جَمِيْعًا ؕ وَعْدَ اللهِ حَقًّا ؕ
اِنَّهٗ يَبْدَؤُا الْخَلْقَ ثُمَّ يُعِيْدُهٗ لِيَجْزِىَ

4. ನಿಮಗೆಲ್ಲರಿಗೂ ಅವನ ಕಡೆಗೇ ಮರಳಿ ಹೋಗಲಿಕ್ಕಿದೆ. ಇದು ಅಲ್ಲಾಹನ ಪರಿಪಕ್ವ ವಾಗ್ದಾನ. ನಿಶ್ಚಯವಾಗಿಯೂ ಸೃಷ್ಟಿಯ ಆರಂಭವನ್ನು ಅವನೇ ಮಾಡುತ್ತಾನೆ. ಅನಂತರ ಅವನೇ

---

1. ಕುರ್‌ಆನನ್ನು ಆಲಿಸಿ ಪ್ರವಾದಿವರ್ಯರ(ಸ) ಬೋಧನೆಯಿಂದ ಪ್ರಭಾವಿತರಾಗಿ ಸತ್ಯವಿಶ್ವಾಸ ಸ್ವೀಕರಿಸುವ ಯಾವನೇ ವ್ಯಕ್ತಿ ಪ್ರಾಣವನ್ನು ಪಣಕ್ಕಿಡಲು ಸಿದ್ಧನಾಗುತ್ತಿದ್ದ. ಯಾವುದೇ ಲೌಕಿಕ ಸಂಬಂಧವನ್ನೂ ತೊರೆದು ಯಾವ ಸಂಕಷ್ಟವನ್ನು ಬೇಕಾದರೂ ಆಹ್ವಾನಿಸಲು ತಯಾರಾಗುತ್ತಿದ್ದ. ಆದ್ದರಿಂದಲೇ ಅವರು ಪ್ರವಾದಿವರ್ಯರನ್ನು(ಸ) ಜಾದೂಗಾರನೆನ್ನುತ್ತಿದ್ದರು.

ಇನ್ನೊಮ್ಮೆ ಸೃಷ್ಟಿಸುವನು. (ಇದು) ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗುವವರಿಗೆ ನ್ಯಾಯಪೂರ್ಣ ಪ್ರತಿಫಲ ಕೊಡಲಿಕ್ಕಾಗಿ ಮತ್ತು 'ಸತ್ಯನಿಷೇಧ' ನೀತಿಯನ್ನು ಕೈಗೊಂಡವರು ಕುದಿಯುವ ನೀರು ಕುಡಿಯಲಿಕ್ಕಾಗಿ ಮತ್ತು ಅವರು 'ಸತ್ಯನಿಷೇಧ'ವೆಸಗುತ್ತಿದ್ದುದರ ಪ್ರತಿಫಲವಾಗಿ ವೇದನಾಯುಕ್ತ ಶಿಕ್ಷೆಯನ್ನು ಅನುಭವಿಸಲಿಕ್ಕಾಗಿ.

الَّذِينَ آمَنُوا وَعَمِلُوا الصَّالِحَاتِ بِالْقِسْطِ ۚ وَالَّذِينَ كَفَرُوا لَهُمْ شَرَابٌ مِنْ حَمِيمٍ وَعَذَابٌ أَلِيمٌ بِمَا كَانُوا يَكْفُرُونَ ﴿٤﴾

5. ಸೂರ್ಯನನ್ನು ಪ್ರಕಾಶಮಾನವನ್ನಾಗಿ ಮಾಡಿದವನೂ ಚಂದ್ರನಿಗೆ ಹೊಳಪನ್ನು ಕೊಟ್ಟವನೂ ನೀವು ಸಂವತ್ಸರಗಳ ಎಣಿಕೆಗಳನ್ನೂ ತಾರೀಕುಗಳ ಗಣನೆಯನ್ನೂ ತಿಳಿದುಕೊಳ್ಳಲಿಕ್ಕಾಗಿ ಅದಕ್ಕೆ ವೃದ್ಧಿ ಕ್ಷಯಗಳ ಘಟ್ಟಗಳನ್ನು ಸರಿಯಾಗಿ ನಿರ್ಣಯಿಸಿ ಕೊಟ್ಟವನೂ ಅವನೇ. ಅಲ್ಲಾಹನು ಇವೆಲ್ಲವುಗಳನ್ನೂ ಸತ್ಯಪೂರ್ಣವಾಗಿಯೇ ಸೃಷ್ಟಿಸಿದನು. ಅವನು ಅರಿವುಳ್ಳವರಿಗೆ ತನ್ನ ದೃಷ್ಟಾಂತಗಳನ್ನು ವಿವರಿಸುತ್ತಾನೆ.

هُوَ الَّذِي جَعَلَ الشَّمْسَ ضِيَاءً وَالْقَمَرَ نُورًا وَقَدَّرَهُ مَنَازِلَ لِتَعْلَمُوا عَدَدَ السِّنِينَ وَالْحِسَابَ ۚ مَا خَلَقَ اللَّهُ ذَٰلِكَ إِلَّا بِالْحَقِّ ۚ يُفَصِّلُ الْآيَاتِ لِقَوْمٍ يَعْلَمُونَ ﴿٥﴾

6. ನಿಶ್ಚಯವಾಗಿಯೂ ರಾತ್ರಿ ಹಗಲುಗಳು ಒಂದನ್ನೊಂದು ಹಿಂಬಾಲಿಸಿಕೊಂಡು ಬರುವುದರಲ್ಲಿಯೂ ಅಲ್ಲಾಹನು ಭೂಮಿ-ಆಕಾಶಗಳಲ್ಲಿ ಸೃಷ್ಟಿಸಿರುವ ಪ್ರತಿಯೊಂದು ವಸ್ತುವಿನಲ್ಲಿಯೂ (ಮಿಥ್ಯ ಆಚಾರ ಮತ್ತು ಮಿಥ್ಯ ವಿಚಾರಗಳಿಂದ) ದೂರವಿರಲು ಬಯಸುವವರಿಗೆ ನಿದರ್ಶನಗಳಿವೆ.[2]

إِنَّ فِي اخْتِلَافِ اللَّيْلِ وَالنَّهَارِ وَمَا خَلَقَ اللَّهُ فِي السَّمَاوَاتِ وَالْأَرْضِ لَآيَاتٍ لِقَوْمٍ يَتَّقُونَ ﴿٦﴾

7. ನಿಶ್ಚಯವಾಗಿಯೂ ನಮ್ಮನ್ನು ಭೇಟಿಯಾಗುವ ನಿರೀಕ್ಷೆಯಿಲ್ಲದವರ, ಐಹಿಕ ಜೀವನದಲ್ಲೇ ತೃಪ್ತರಾಗಿರುವವರ ಹಾಗೂ ನಮ್ಮ ದೃಷ್ಟಾಂತಗಳ ಬಗ್ಗೆ ಅಲಕ್ಷ್ಯರಾಗಿರುವವರ-

إِنَّ الَّذِينَ لَا يَرْجُونَ لِقَاءَنَا وَرَضُوا بِالْحَيَاةِ الدُّنْيَا وَاطْمَأَنُّوا بِهَا وَالَّذِينَ هُمْ عَنْ آيَاتِنَا غَافِلُونَ ﴿٧﴾

8. ಅಂತಿಮ ವಾಸಸ್ಥಾನವು 'ನರಕ' ಆಗಿರುವುದು. ಇದು ಅವರು (ತಮ್ಮ ಈ ತಪ್ಪು ಆಚಾರ ಮತ್ತು ವಿಚಾರಗಳ ನಿಮಿತ್ತ) ಎಸಗಿದ ಕೆಡುಕುಗಳ ಫಲವಾಗಿದೆ.

أُولَٰئِكَ مَأْوَاهُمُ النَّارُ بِمَا كَانُوا يَكْسِبُونَ ﴿٨﴾

9. ಖಂಡಿತವಾಗಿಯೂ ಸತ್ಯವಿಶ್ವಾಸವಿರಿಸಿ (ಅರ್ಥಾತ್ ಈ ಗ್ರಂಥವು ಪ್ರತಿಪಾದಿಸುತ್ತಿರುವ ಸತ್ಯಗಳನ್ನು ಸ್ವೀಕರಿಸಿ) ಸತ್ಕರ್ಮಗಳನ್ನು ಮಾಡುತ್ತಿದ್ದವರನ್ನು ಅವರ ಪ್ರಭು ಅವರ ಈಮಾನಿನ ಕಾರಣವಾಗಿ ಸನ್ಮಾರ್ಗದಲ್ಲಿ ನಡೆಸುವನು; ಅನುಗ್ರಹಭರಿತ ಸ್ವರ್ಗೋದ್ಯಾನಗಳಲ್ಲಿ ಅವರ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು.

إِنَّ الَّذِينَ آمَنُوا وَعَمِلُوا الصَّالِحَاتِ يَهْدِيهِمْ رَبُّهُمْ بِإِيمَانِهِمْ ۖ تَجْرِي مِنْ تَحْتِهِمُ الْأَنْهَارُ فِي جَنَّاتِ النَّعِيمِ ﴿٩﴾

2. ಈ ನಿದರ್ಶನಗಳಿಂದ ವಾಸ್ತವಿಕತೆಯೆಡೆಗೆ ತಲಪಲು ಈ ಎರಡು ಗುಣಗಳನ್ನು ಹೊಂದಿರುವವರಿಗೆ ಮಾತ್ರ ಸಾಧ್ಯ. ಮೊದಲನೆಯದಾಗಿ ಅವರು ಅಜ್ಞಾನಜನ್ಯ ಪಕ್ಷಪಾತಗಳಿಂದ ಮುಕ್ತರಾಗಿ ಜ್ಞಾನಸಂಪಾದನೆಗಾಗಿ ಅಲ್ಲಾಹನು ಮನುಷ್ಯನಿಗೆ ನೀಡಿರುವ ಮಾಧ್ಯಮಗಳನ್ನು ಉಪಯೋಗಿಸಬೇಕು. ಎರಡನೆಯದಾಗಿ ತಪ್ಪಿನಿಂದ ಮುಕ್ತರಾಗಿ ಸತ್ಯಮಾರ್ಗವನ್ನು ಅನುಸರಿಸುವ ಬಯಕೆ ಅವರಲ್ಲಿರಬೇಕು.

10. ಅದರಲ್ಲಿ ಅವರ ಧ್ವನಿಯು, "ಓ ಅಲ್ಲಾಹ್, ನೀನು ಪರಿಶುದ್ಧನು" ಎಂದೂ ಅವರ ಪ್ರಾರ್ಥನೆಯು "ಪ್ರಶಾಂತಿ ಇರಲಿ" ಎಂದೂ ಅವರ ಪ್ರತಿಯೊಂದು ಮಾತಿನ ಕೊನೆಯನುಡಿ "ಸರ್ವ ಸ್ತುತಿ ಸ್ತೋತ್ರಗಳೂ ಸಕಲ ಲೋಕಗಳ ಪ್ರಭುವಾದ ಅಲ್ಲಾಹನಿಗೇ" ಎಂದೂ ಆಗಿರುವುದು.

دَعْوٰىهُمْ فِيْهَا سُبْحٰنَكَ اللّٰهُمَّ وَتَحِيَّتُهُمْ فِيْهَا سَلٰمٌ ۚ وَاٰخِرُ دَعْوٰىهُمْ اَنِ الْحَمْدُ لِلّٰهِ رَبِّ الْعٰلَمِيْنَ ﴿١٠﴾

11. ಜನರು ಲೌಕಿಕ ಹಿತವನ್ನು ಬೇಡುವಲ್ಲಿ ತವಕಪಡುವಷ್ಟೇ ಅವರಿಗೆ ಕೇಡುಂಟು ಮಾಡಲಿಕ್ಕಾಗಿ ಅಲ್ಲಾಹನು ತವಕಪಡುತ್ತಿದ್ದರೆ, ಅವರ ಕರ್ಮಾವಧಿಯನ್ನು ಎಂದೋ ಮುಗಿಸಿಬಿಡಲಾಗುತ್ತಿತ್ತು. (ಆದರೆ ಇದು ನಮ್ಮ ಕ್ರಮವಲ್ಲ) ಆದುದರಿಂದ ನಮ್ಮನ್ನು ಭೇಟಿಯಾಗುವ ನಿರೀಕ್ಷೆಯನ್ನಿರಿಸದವರನ್ನು ನಾವು ಅವರ ವಿದ್ರೋಹಗಳಲ್ಲೇ ಅಲೆದಾಡುತ್ತಿರಲು ಬಿಟ್ಟು ಬಿಡುತ್ತೇವೆ.

وَلَوْ يُعَجِّلُ اللّٰهُ لِلنَّاسِ الشَّرَّ اسْتِعْجَالَهُمْ بِالْخَيْرِ لَقُضِيَ اِلَيْهِمْ اَجَلُهُمْ ؕ فَنَذَرُ الَّذِيْنَ لَا يَرْجُوْنَ لِقَآءَنَا فِيْ طُغْيَانِهِمْ يَعْمَهُوْنَ ﴿١١﴾

12. ಮಾನವನ ಸ್ಥಿತಿಯಿದು- ಅವನ ಮೇಲೆ ಕಷ್ಟಕಾಲ ಬಂದಾಗ ನಿಂತೂ ಕುಳಿತೂ ಮಲಗಿಯೂ ನಮ್ಮೊಡನೆ ಮೊರೆಯಿಡುತ್ತಾನೆ. ಆದರೆ ನಾವು ಅವನ ಕಷ್ಟವನ್ನು ದೂರಸರಿಸಿ ಬಿಟ್ಟಾಗ ಅವನು ಎಂದೂ ತನ್ನ ಕಷ್ಟ ಕಾಲದಲ್ಲಿ ನಮ್ಮೊಡನೆ ಮೊರೆಯಿಡಲೇ ಇಲ್ಲವೋ ಎಂಬಂತೆ ನಡೆದು ಬಿಡುತ್ತಾನೆ. ಹೀಗೆ ಹದಮೀರಿ ನಡೆಯುವವರಿಗೆ ಅವರ ಕೃತ್ಯಗಳು ಮನೋಹರಗೊಳಿಸಲ್ಪಟ್ಟಿವೆ.

وَاِذَا مَسَّ الْاِنْسَانَ الضُّرُّ دَعَانَا لِجَنْۢبِهٖۤ اَوْ قَاعِدًا اَوْ قَآئِمًا ۚ فَلَمَّا كَشَفْنَا عَنْهُ ضُرَّهٗ مَرَّ كَاَنْ لَّمْ يَدْعُنَاۤ اِلٰى ضُرٍّ مَّسَّهٗ ؕ كَذٰلِكَ زُيِّنَ لِلْمُسْرِفِيْنَ مَا كَانُوْا يَعْمَلُوْنَ ﴿١٢﴾

13. ಹೇ ಜನರೇ; ನಿಮಗಿಂತ ಮುಂಚಿನ ಜನಾಂಗಗಳು[3] ಅಕ್ರಮವೆಸಗಿದಾಗ ನಾವು ಅವುಗಳನ್ನು ನಾಶಗೊಳಿಸಿದೆವು. ಅವರ ಸಂದೇಶ ವಾಹಕರು ಸುವ್ಯಕ್ತ ಪ್ರಮಾಣಗಳನ್ನು ಅವರ ಬಳಿಗೆ ತಂದರು. ಆದರೂ ಅವರು ವಿಶ್ವಾಸವಿಡಲಿಲ್ಲ. ನಾವು ಅಪರಾಧಿಗಳಿಗೆ ಅವರ ಅಪರಾಧಗಳ ಪ್ರತಿಫಲವನ್ನು ಇದೇ ರೀತಿಯಲ್ಲಿ ಕೊಡುತ್ತೇವೆ.

وَلَقَدْ اَهْلَكْنَا الْقُرُوْنَ مِنْ قَبْلِكُمْ لَمَّا ظَلَمُوْا ۙ وَجَآءَتْهُمْ رُسُلُهُمْ بِالْبَيِّنٰتِ وَمَا كَانُوْا لِيُؤْمِنُوْا ؕ كَذٰلِكَ نَجْزِى الْقَوْمَ الْمُجْرِمِيْنَ ﴿١٣﴾

3. ಮೂಲದಲ್ಲಿ 'ಕರ್ನ್' ಎಂಬ ಪದ ಪ್ರಯೋಗವಾಗಿದೆ. ಅರಬಿ ಭಾಷೆಯಲ್ಲಿ ಅದರ ಅರ್ಥ ಸಾಮಾನ್ಯವಾಗಿ ಒಂದು 'ಯುಗಕ್ಕೆ ಸೇರಿದ ಮಾನವರು' ಎಂದಾಗಿದೆ. ಆದರೆ ಕುರ್‌ಆನಿನಲ್ಲಿ ವಿವಿಧ ಸಂದರ್ಭಗಳಲ್ಲಿ ಈ ಪದ ಪ್ರಯೋಗವಾಗಿರುವ ಶೈಲಿಯನ್ನು ಗಮನಿಸಿದರೆ 'ಕರ್ನ್' ಎಂಬ ಶಬ್ದ ಆಯಾ ಕಾಲದಲ್ಲಿ ಅತ್ಯಂತ ಉಚ್ಛ್ರಾಯದ ಸ್ಥಿತಿಯಲ್ಲಿದ್ದ ಜನಾಂಗಕ್ಕೆ ಉಪಯೋಗಿಸಲ್ಪಟ್ಟಿದೆ ಎಂದು ವ್ಯಕ್ತವಾಗುತ್ತದೆ. ಅಂತಹ ಜನಾಂಗವನ್ನು ನಾಶಪಡಿಸಲಾಯಿತು ಎಂದರೆ ಅವರ ವಂಶವನ್ನು ಕೊನೆಗೊಳಿಸಲಾಯಿತು ಎಂದು ಮಾತ್ರ ಅರ್ಥವಲ್ಲ. ಅವರನ್ನು ಉನ್ನತ ಸ್ಥಾನದಿಂದ ಕೆಳಗಿಳಿಸುವುದು, ಅವರ ಸಂಸ್ಕೃತಿ ಮತ್ತು ನಾಗರಿಕತೆ ನಿರ್ನಾಮವಾಗುವುದು, ಅವರ ಅನನ್ಯತೆ ಕೊನೆಗೊಳ್ಳುವುದು, ಅವರ ವಿಭಾಗಗಳು ವಿಚ್ಛಿದ್ರವಾಗಿ ಇತರ ಜನಾಂಗಗಳಲ್ಲಿ ಲೀನವಾಗಿ ಬಿಡುವುದು - ಮುಂತಾದವುಗಳೆಲ್ಲವೂ ವಿನಾಶದ ಸ್ವರೂಪಗಳೇ ಆಗಿವೆ.

14. ಈಗ ನೀವು ಹೇಗೆ ವರ್ತಿಸುತ್ತೀರೆಂದು ನೋಡಲಿಕ್ಕಾಗಿ ನಾವು ಅವರ ತರುವಾಯ ನಿಮಗೆ ಭೂಮಿಯಲ್ಲಿ ಅವರ ಸ್ಥಾನ ಕೊಟ್ಟೆವು.

ثُمَّ جَعَلْنٰكُمْ خَلٰٓئِفَ فِى الْاَرْضِ مِنْ
بَعْدِهِمْ لِنَنْظُرَ كَيْفَ تَعْمَلُوْنَ ﴿١٤﴾

15. ನಮ್ಮ ಸುವ್ಯಕ್ತ ವಚನಗಳನ್ನು ಅವರಿಗೆ ತಿಳಿಯ ಹೇಳಿದಾಗ ನಮ್ಮನ್ನು ಭೇಟಿಯಾಗುವ ನಿರೀಕ್ಷೆಯನ್ನಿರಿಸದವರು, "ಇದರ ಬದಲಿಗೆ ಇನ್ನೊಂದು ಕುರ್‌ಆನನ್ನು ತನ್ನಿರಿ, ಇಲ್ಲವೆ ಇದರಲ್ಲಿ ಸ್ವಲ್ಪ ತಿದ್ದುಪಡಿ ಮಾಡಿರಿ" ಎಂದು ಹೇಳುತ್ತಾರೆ, ಓ ಪೈಗಂಬರರೇ, ಅವರೊಡನೆ (ಹೀಗೆ) ಹೇಳಿರಿ-"ನನ್ನ ಕಡೆಯಿಂದ ಇದರಲ್ಲೇನಾದರೂ ಮಾರ್ಪಾಟು ಮಾಡುವುದು ನನ್ನ ಕೆಲಸವಲ್ಲ. ನಾನಂತು ನನಗೆ ಕಳುಹಿಸಲ್ಪಡುವ 'ದಿವ್ಯವಾಣಿ'ಯನ್ನು ಅನುಸರಿಸುವವನಾಗಿರುತ್ತೇನೆ. ನಾನು ನನ್ನ ಪ್ರಭುವಿನ ಆಜ್ಞೋಲ್ಲಂಘನೆ ಮಾಡಿದರೆ ನನಗೆ ಒಂದು ಭಯಾನಕ ಯಾತನೆಯ ಭಯವಿದೆ."

وَاِذَا تُتْلٰى عَلَيْهِمْ اٰيَاتُنَا بَيِّنٰتٍ ۙ قَالَ
الَّذِيْنَ لَا يَرْجُوْنَ لِقَآءَنَا ائْتِ بِقُرْاٰنٍ
غَيْرِ هٰذَآ اَوْ بَدِّلْهُ ۚ قُلْ مَا يَكُوْنُ لِىْٓ
اَنْ اُبَدِّلَهٗ مِنْ تِلْقَآئِ نَفْسِىْ ۚ اِنْ اَتَّبِعُ
اِلَّا مَا يُوْحٰٓى اِلَىَّ ۚ اِنِّىْٓ اَخَافُ اِنْ عَصَيْتُ
رَبِّىْ عَذَابَ يَوْمٍ عَظِيْمٍ ﴿١٥﴾

16. ಮತ್ತು ಹೇಳಿರಿ- "ಅಲ್ಲಾಹನ ವಿಧಿ ನಿಯಮವು ಇದೇ ಆಗಿರುತ್ತಿದ್ದರೆ ನಾನು ನಿಮಗೆ ಈ ಕುರ್‌ಆನನ್ನು ಎಂದಿಗೂ ತಿಳಿಯ ಹೇಳುತ್ತಿರ ಲಿಲ್ಲ ಮತ್ತು ಅಲ್ಲಾಹನು ನಿಮಗೆ ಇದರ ವರ್ತಮಾನವನ್ನೂ ಕೊಡುತ್ತಿರಲಿಲ್ಲ. ನಾನು ಇದಕ್ಕೆ ಮುಂಚೆ ನಿಮ್ಮ ನಡುವೆ ಕೆಲವು ಕಾಲ ಕಳೆದಿರುವೆನಷ್ಟೆ. ನೀವೇನು ವಿವೇಚಿಸುವುದಿಲ್ಲವೇ?[4]

قُلْ لَّوْ شَآءَ اللّٰهُ مَا تَلَوْتُهٗ عَلَيْكُمْ وَلَآ
اَدْرٰىكُمْ بِهٖ ۖ فَقَدْ لَبِثْتُ فِيْكُمْ عُمُرًا
مِّنْ قَبْلِهٖ ؕ اَفَلَا تَعْقِلُوْنَ ﴿١٦﴾

17. ಸುಳ್ಳೊಂದನ್ನು ಸೃಷ್ಟಿಸಿ ಅಲ್ಲಾಹನ ಮೇಲೆ ಹೊರಿಸುವವನಿಗಿಂತ ಅಥವಾ ನಿಜವಾದ ವಚನಗಳನ್ನು ಸುಳ್ಳೆಂದು ಹೇಳುವವನಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು? ನಿಶ್ಚಯವಾಗಿಯೂ ಅಪರಾಧಿಗಳು ಎಂದೂ ವಿಜಯಿಗಳಾಗಲಾರರು."

فَمَنْ اَظْلَمُ مِمَّنِ افْتَرٰى عَلَى اللّٰهِ
كَذِبًا اَوْ كَذَّبَ بِاٰيٰتِهٖ ؕ اِنَّهٗ لَا
يُفْلِحُ الْمُجْرِمُوْنَ ﴿١٧﴾

18. ಅವರು ಅಲ್ಲಾಹನನ್ನು ಬಿಟ್ಟು ಇವರಿಗೆ ನಷ್ಟವನ್ನಾಗಲಿ ಲಾಭವನ್ನಾಗಲಿ ಉಂಟು ಮಾಡದಂಥವರನ್ನು ಆರಾಧಿಸುತ್ತಾರೆ ಮತ್ತು "ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸು ಮಾಡುವ ವರು" ಎಂದು ಹೇಳುತ್ತಾರೆ. ಓ ಪೈಗಂಬರರೇ, ಇವರೊಡನೆ ಹೇಳಿರಿ, "ಅಲ್ಲಾಹನು ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ

وَيَعْبُدُوْنَ مِنْ دُوْنِ اللّٰهِ مَا لَا يَضُرُّهُمْ
وَلَا يَنْفَعُهُمْ وَيَقُوْلُوْنَ هٰٓؤُلَآءِ شُفَعَآؤُنَا
عِنْدَ اللّٰهِ ؕ قُلْ اَتُنَبِّئُوْنَ اللّٰهَ بِمَا لَا يَعْلَمُ
فِى السَّمٰوٰتِ وَلَا فِى الْاَرْضِ ؕ سُبْحٰنَهٗ

4. ಅರ್ಥಾತ್- ನಾನು ನಿಮ್ಮ ಪಾಲಿಗೆ ಅಪರಿಚಿತ ವ್ಯಕ್ತಿಯೇನೂ ಅಲ್ಲ. ನಿಮ್ಮ ನಗರದಲ್ಲೇ ನಾನು ಹುಟ್ಟಿದೆ. ನಿಮ್ಮ ಮಧ್ಯೆ ಇದ್ದುಕೊಂಡೇ ಬಾಲ್ಯಾವಸ್ಥೆಯಿಂದ ಈ ವಯಸ್ಸಿಗೆ ತಲಪಿದ್ದೇನೆ. ನನ್ನ ಸಮಸ್ತ ಜೀವನವನ್ನು ನೋಡಿದ ನಂತರವೂ ಈ ಕುರ್‌ಆನ್ ನಾನು ರಚಿಸಿದ ವಾಣಿಯೆಂದು ಪ್ರಾಮಾಣಿಕ ಚಿತ್ತದಿಂದ ಹೇಳಲು ನಿಮಗೆ ಸಾಧ್ಯವೇ? ನನ್ನ ಮನಸ್ಸಿಗೆ ತೋಚಿದ್ದನ್ನು ಹೇಳಿ ಜನರೊಡನೆ ಇದು ಅಲ್ಲಾಹನ ವತಿಯಿಂದ ಅವತೀರ್ಣಗೊಂಡಿದೆ ಎಂದು ಹೇಳುವಂತಹ ಘೋರ ಸುಳ್ಳು ನುಡಿಯನ್ನು ನೀವು ನನ್ನಿಂದ ನಿರೀಕ್ಷಿಸುತ್ತೀರಾ?

وَتَعٰلٰى عَمَّا يُشْرِكُوْنَ ﴿١٨﴾

ತಿಳಿಯದಂತಹ ಸುದ್ದಿಯನ್ನು ನೀವು ಅವನಿಗೆ ತಿಳಿಸುತ್ತೀರಾ?[5] ಇವರು ಸಹಭಾಗಿಗಳನ್ನಾಗಿ ಮಾಡುತ್ತಿರುವವುಗಳಿಂದೆಲ್ಲ ಅವನು ಅತಿ ಪಾವನನಾಗಿರುತ್ತಾನೆ."

وَمَا كَانَ النَّاسُ اِلَّاۤ اُمَّةً وَّاحِدَةً فَاخْتَلَفُوْا ؕ وَلَوْلَا كَلِمَةٌ سَبَقَتْ مِنْ رَّبِّكَ لَقُضِىَ بَيْنَهُمْ فِيْمَا فِيْهِ يَخْتَلِفُوْنَ ﴿١٩﴾

19. ಆರಂಭದಲ್ಲಿ ಮಾನವರೆಲ್ಲರೂ ಒಂದೇ ಸಮುದಾಯವಾಗಿದ್ದರು. ಅನಂತರ ಅವರು ವಿವಿಧ ತತ್ವಾದರ್ಶಗಳನ್ನು ಉಂಟು ಮಾಡಿ ಕೊಂಡರು. ನಿಮ್ಮ ಪ್ರಭುವಿನ ಕಡೆಯಿಂದ ಒಂದು ವಿಷಯವು ಮೊದಲೇ ತೀರ್ಮಾನವಾಗದಿರುತ್ತಿದ್ದರೆ ಅವರು ಪರಸ್ಪರ ಭಿನ್ನಾಭಿಪ್ರಾಯವಿರಿಸುತ್ತಿರುವುದರ ತೀರ್ಮಾನ ಮಾಡಿ ಬಿಡಲಾಗುತ್ತಿತ್ತು.[6]

وَيَقُوْلُوْنَ لَوْلَاۤ اُنْزِلَ عَلَيْهِ اٰيَةٌ مِّنْ رَّبِّهٖ ۚ فَقُلْ اِنَّمَا الْغَيْبُ لِلّٰهِ فَانْتَظِرُوْا ۚ اِنِّىْ مَعَكُمْ مِّنَ الْمُنْتَظِرِيْنَ ﴿٢٠﴾

20. ಈ ಪ್ರವಾದಿಯ ಮೇಲೆ ಇವನ ಪ್ರಭುವಿನ ಕಡೆಯಿಂದ ಒಂದು ದೃಷ್ಟಾಂತವೇಕೆ ಅವತೀರ್ಣಗೊಳಿಸಲ್ಪಡಲಿಲ್ಲವೆಂದು ಇವರು ಕೇಳುತ್ತಾರಲ್ಲ. ಅವರೊಡನೆ, "ನಿಶ್ಚಯವಾಗಿಯೂ ಅದೃಶ್ಯ ಜ್ಞಾನದ ಒಡೆಯ ಅಲ್ಲಾಹನೇ ಆಗಿರುತ್ತಾನೆ. ನೀವು ಕಾಯುತ್ತಿರಿ, ನಾನೂ ನಿಮ್ಮೊಂದಿಗೆ ಕಾದುಕೊಂಡಿರುತ್ತೇನೆ" ಎಂದು ಹೇಳಿರಿ.

وَاِذَاۤ اَذَقْنَا النَّاسَ رَحْمَةً مِّنْۢ بَعْدِ ضَرَّآءَ مَسَّتْهُمْ اِذَا لَهُمْ مَّكْرٌ فِىْۤ اٰيَاتِنَا ؕ قُلِ اللّٰهُ اَسْرَعُ مَكْرًا ؕ اِنَّ رُسُلَنَا يَكْتُبُوْنَ مَا تَمْكُرُوْنَ ﴿٢١﴾

21. ನಾವು ಜನರಿಗೆ ಕಷ್ಟದ ಬಳಿಕ ಅನುಗ್ರಹದ ಸವಿಯನ್ನುಣಿಸಿದಾಗ ಆ ಕೂಡಲೆ ಅವರು ನಮ್ಮ ನಿದರ್ಶನಗಳ ಬಗ್ಗೆ ಕುತಂತ್ರಗಳನ್ನು ಆರಂಭಿಸಿಬಿಡುತ್ತಾರೆ.[7] "ಅಲ್ಲಾಹ್ ತಂತ್ರಗಾರಿಕೆಯಲ್ಲಿ ನಿಮಗಿಂತ ಹೆಚ್ಚು ಶೀಘ್ರನು. ಅವನ ದೂತರು ನಿಮ್ಮ ಎಲ್ಲ ಕುತಂತ್ರಗಳನ್ನೂ ಬರೆದಿಡುತ್ತಿದ್ದಾರೆ" ಎಂದು ಅವರೊಡನೆ ಹೇಳಿರಿ.

هُوَ الَّذِىْ يُسَيِّرُكُمْ فِى الْبَرِّ وَالْبَحْرِ ؕ حَتّٰۤى اِذَا كُنْتُمْ فِى الْفُلْكِ ۚ وَجَرَيْنَ بِهِمْ بِرِيْحٍ طَيِّبَةٍ وَّفَرِحُوْا بِهَا جَآءَتْهَا رِيْحٌ عَاصِفٌ

22. ನಿಮ್ಮನ್ನು ನೆಲ-ಜಲಗಳಲ್ಲಿ ಅಲ್ಲಾಹನೇ ಚಲಾಯಿಸುತ್ತಾನೆ. ನೀವು ನಾವೆಗಳನ್ನೇರಿ ಅನುಕೂಲಕರ ಮಾರುತದೊಂದಿಗೆ ಆನಂದ ತುಂದಿಲರಾಗಿ ಪ್ರಯಾಣ ಮಾಡುತ್ತಿರುವಾಗ ಹಠಾತ್ತನೆ ಪ್ರತಿಕೂಲ ಮಾರುತವು ಬಲವಾಗಿ ಬೀಸಿ ಎಲ್ಲ ಕಡೆಗಳಿಂದಲೂ ತೆರೆಗಳು ಅಪ್ಪಳಿಸುತ್ತಿರುವಾಗ ಮತ್ತು ನಾವು ಚಂಡಮಾರುತದಿಂದ

5. ಯಾವುದೇ ವಸ್ತುವಿನ ಬಗ್ಗೆ ಅಲ್ಲಾಹನಿಗೆ ತಿಳಿದಿಲ್ಲವೆಂದರೆ ಆ ವಸ್ತು ಅಸ್ತಿತ್ವದಲ್ಲೇ ಇಲ್ಲವೆಂದರ್ಥ. ಏಕೆಂದರೆ ಅಸ್ತಿತ್ವದಲ್ಲಿರುವ ಎಲ್ಲದರ ಬಗ್ಗೆಯೂ ಅಲ್ಲಾಹನಿಗೆ ತಿಳಿದಿದೆ. ಒಟ್ಟಿನಲ್ಲಿ ಅವರ ಪರವಾಗಿ ಶಿಫಾರಸು ಮಾಡುವವರು ಯಾರೂ ಇಲ್ಲ ಎಂಬುದರ ಕಡೆಗೆ ಇದೊಂದು ಸೂಕ್ಷ್ಮವಾದ ಸೂಚನೆಯಾಗಿದೆ. ಅಲ್ಲಾಹನ ಬಳಿ ನಿಮ್ಮ ಪರವಾಗಿ ಶಿಪಾರಸು ಮಾಡುವವರು ಭೂಮಿ-ಆಕಾಶಗಳಲ್ಲಿ ಇರುವ ಬಗ್ಗೆ ಅವನಿಗೆ ತಿಳಿದಿಲ್ಲ. ಹಾಗಿರುವಾಗ ನೀವು ಯಾವ ಶಿಪಾರಸುದಾರರ ಬಗ್ಗೆ ಹೇಳುತ್ತಿದ್ದೀರಿ? ಎಂದು ಕೇಳಲಾಗಿದೆ.

6. ಅರ್ಥಾತ್ ಅಂತಿಮ ತೀರ್ಮಾನ ನಿರ್ಣಾಯಕ ದಿನದಂದು ನಡೆಯುವುದು ಎಂಬ ಬಗ್ಗೆ ಅಲ್ಲಾಹನು ಮೊದಲೇ ತೀರ್ಮಾನಿಸಿರದಿರುತ್ತಿದ್ದರೆ ಅವನು ಇಲ್ಲೇ ಆ ಬಗ್ಗೆ ತೀರ್ಮಾನಿಸಿ ಬಿಡುತ್ತಿದ್ದನು.

7. ಅರ್ಥಾತ್- ಸಂಕಷ್ಟಗಳು ಅಲ್ಲಾಹನ ಕಡೆಯಿಂದ ಬರುವ ದೃಷ್ಟಾಂತವಾಗಿವೆ. ಅಲ್ಲಾಹನ ಹೊರತು ಅದನ್ನು ನೀಗಿಸುವವರು ಯಾರೂ ಇಲ್ಲ ಎಂಬ ಪ್ರಜ್ಞೆಯನ್ನು ಅದು ಮಾನವನಲ್ಲಿ ಬೆಳೆಸುತ್ತದೆ. ಆದರೆ ಅದು ದೂರವಾಗಿ ಒಳ್ಳೆಯ ದಿನಗಳು ಬಂದ ತಕ್ಷಣ ಇದು ನಮ್ಮ ಆರಾಧ್ಯರುಗಳ ಮತ್ತು ಶಿಪಾರಸುದಾರರ ಅನುಗ್ರಹದ ಫಲ ಎಂದು ಅವರು ಹೇಳತೊಡಗುತ್ತಾರೆ.

ಸುತ್ತುವರಿಯಲ್ಪಟ್ಟೆವೆಂದು ಪ್ರಯಾಣಿಕರು ಮನಗಾಣು ತ್ತಿರುವಾಗ ಎಲ್ಲರೂ ತಮ್ಮ ಧರ್ಮವನ್ನು ಅಲ್ಲಾಹನಿಗೆ ಮಾತ್ರ ಮೀಸಲಾಗಿರಿಸಿಕೊಂಡು ಅವನೊಡನೆ, "ನೀನು ಈ ಗಂಡಾಂತರದಿಂದ ನಮ್ಮನ್ನು ಪಾರುಗಾಣಿಸಿದರೆ ನಾವು ಕೃತಜ್ಞ ದಾಸರಾಗುವೆವು" ಎಂದು ಪ್ರಾರ್ಥಿಸುತ್ತಾರೆ.

وَجَآءَهُمُ الْمَوْجُ مِنْ كُلِّ مَكَانٍ وَّظَنُّوْٓا
اَنَّهُمْ اُحِيْطَ بِهِمْ ۙ دَعَوُا اللّٰهَ مُخْلِصِيْنَ
لَهُ الدِّيْنَ ۚ لَئِنْ اَنْجَيْتَنَا مِنْ هٰذِهٖ
لَنَكُوْنَنَّ مِنَ الشّٰكِرِيْنَ ﴿٢٢﴾

23. ಆದರೆ, ಅವನು ಅವರನ್ನು ರಕ್ಷಿಸಿದಾಗ ಮತ್ತೆ ಅದೇ ಜನರು ಸತ್ಯದಿಂದ ವಿಮುಖರಾಗಿ ಭೂಮಿಯಲ್ಲಿ ಬಂಡಾಯವೇಳುತ್ತಾರೆ. ಜನರೇ, ನಿಮ್ಮ ಈ ಬಂಡಾಯವು ನಿಮ್ಮ ವಿರುದ್ಧವೇ ತಿರುಗಿ ಬೀಳುತ್ತದೆ. ಐಹಿಕ ಜೀವನವು ಕೇವಲ ಕೆಲವೇ ದಿನಗಳ ಸುಖಾನಂದ, ಅದನ್ನೀಗ (ಅನುಭವಿಸಿಕೊಳ್ಳಿರಿ) ಅನಂತರ ನಿಮಗೆ ನಮ್ಮ ಕಡೆಗೆ ಮರಳಿ ಬರಲಿಕ್ಕಿದೆ. ನೀವು ಏನು ಮಾಡುತ್ತಿದ್ದಿರೆಂಬುದನ್ನು ಆಗ ನಾವು ನಿಮಗೆ ತಿಳಿಸುವೆವು.

فَلَمَّآ اَنْجٰىهُمْ اِذَا هُمْ يَبْغُوْنَ فِى الْاَرْضِ
بِغَيْرِ الْحَقِّ ۗ يٰٓاَيُّهَا النَّاسُ اِنَّمَا بَغْيُكُمْ
عَلٰٓى اَنْفُسِكُمْ ۙ مَّتَاعَ الْحَيٰوةِ الدُّنْيَا ۡ ثُمَّ
اِلَيْنَا مَرْجِعُكُمْ فَنُنَبِّئُكُمْ بِمَا كُنْتُمْ
تَعْمَلُوْنَ ﴿٢٣﴾

24. (ನೀವು ನಮ್ಮ ದೃಷ್ಟಾಂತಗಳನ್ನು ಕಡೆಗಣಿಸಲು ಯಾವ ಜೀವನದ ಮದೋನ್ಮತ್ತತೆಯು ಕಾರಣವಾಗಿರುತ್ತದೋ ಆ) ಐಹಿಕ ಜೀವನದ ಉದಾಹರಣೆಯು (ಹೀಗಿದೆ): - ನಾವು ಆಕಾಶದಿಂದ ಮಳೆಗರೆದೆವು. ಆಗ ಜನರೂ ಜಾನುವಾರುಗಳೂ ತಿನ್ನುವ ಬೆಳೆಯು ಹುಲುಸಾಗಿ ಬೆಳೆಯಿತು. ಭೂಮಿಯು ಸಸ್ಯ ಶ್ಯಾಮಲ ವಾಗಿದ್ದು ಹೊಲ ಗದ್ದೆಗಳು ಬೆಳೆ ತುಂಬಿ ನಿಂತಿದ್ದುವು ಹಾಗೂ ಅವುಗಳ ಮಾಲಿಕರು ನಾವೀಗ ಇದರಿಂದ ಫಲ ಹೊಂದಲು ಸಮರ್ಥರಾಗಿದ್ದೇವೆಂದು ಭಾವಿಸುತ್ತಿದ್ದರು. ಆಗ ಹಠಾತ್ತನೆ ರಾತ್ರೆ ಅಥವಾ ಹಗಲಲ್ಲಿ ನಮ್ಮ ಅಪ್ಪಣೆ ಬಂದು ಬಿಟ್ಟಿತು ಮತ್ತು ನಿನ್ನೆ ಅಲ್ಲೇನೂ ಇರಲೇ ಇಲ್ಲವೋ ಎಂಬಂತೆ ನಾವು ಅದನ್ನು ಅಳಿಸಿಬಿಟ್ಟೆವು. ವಿವೇಚಿಸುವ ಜನರಿಗೆ ನಾವು ಈ ರೀತಿಯಲ್ಲಿ ದೃಷ್ಟಾಂತಗಳನ್ನು ಸುಸ್ಪಷ್ಟವಾಗಿ ಮುಂದಿರಿಸುತ್ತೇವೆ.

اِنَّمَا مَثَلُ الْحَيٰوةِ الدُّنْيَا كَمَآءٍ اَنْزَلْنٰهُ
مِنَ السَّمَآءِ فَاخْتَلَطَ بِهٖ نَبَاتُ الْاَرْضِ
مِمَّا يَاْكُلُ النَّاسُ وَالْاَنْعَامُ ۭ حَتّٰٓى
اِذَآ اَخَذَتِ الْاَرْضُ زُخْرُفَهَا وَازَّيَّنَتْ
وَظَنَّ اَهْلُهَآ اَنَّهُمْ قٰدِرُوْنَ عَلَيْهَآ ۙ اَتٰىهَآ
اَمْرُنَا لَيْلًا اَوْ نَهَارًا فَجَعَلْنٰهَا حَصِيْدًا
كَاَنْ لَّمْ تَغْنَ بِالْاَمْسِ ۭ كَذٰلِكَ نُفَصِّلُ
الْاٰيٰتِ لِقَوْمٍ يَّتَفَكَّرُوْنَ ﴿٢٤﴾

25. (ನೀವು ಈ ಅಸ್ಥಿರ ಜೀವನದ ಮಾಯೆಯಲ್ಲಿ ಸಿಕ್ಕಿ ಬೀಳುತ್ತಿರುವಿರಿ) ಅಲ್ಲಾಹನು ನಿಮ್ಮನ್ನು 'ದಾರುಸ್ಸಲಾಮ್'ನ (ಶಾಂತಿಗೃಹದ) ಕಡೆಗೆ ಕರೆಯುತ್ತಿದ್ದಾನೆ.[8] (ಸನ್ಮಾರ್ಗ ದರ್ಶನವು ಅವನ ಅಂಕೆಯಲ್ಲಿದೆ) ಅವನು ತನಗಿಷ್ಟ ಬಂದವರಿಗೆ ಸನ್ಮಾರ್ಗ ದರ್ಶನ ಮಾಡಿಸುತ್ತಾನೆ.

وَاللّٰهُ يَدْعُوْٓا اِلٰى دَارِ السَّلٰمِ ۭ وَيَهْدِيْ
مَنْ يَّشَآءُ اِلٰى صِرَاطٍ مُّسْتَقِيْمٍ ﴿٢٥﴾

8. ಅರ್ಥಾತ್- ಪಾರತ್ರಿಕ ಜೀವನದಲ್ಲಿ ನಿಮ್ಮನ್ನು 'ದಾರಸ್ಸಲಾಮ್'ಗೆ ಅರ್ಹರಾಗಿ ಮಾಡುವಂತಹ ಜೀವನವನ್ನು ಲೋಕದಲ್ಲಿ ಬಾಳಬೇಕೆಂಬ ಕರೆಯನ್ನು ಅವನು ನೀಡುತ್ತಿದ್ದಾನೆ. 'ದಾರುಸ್ಸಲಾಮ್' ಎಂದರೆ ಸ್ವರ್ಗವಾಗಿದೆ. ಅರ್ಥಾತ್ ಶಾಂತಿಯ ಭವನ. ಯಾವುದೇ ಅಪಾಯ, ಸಂಕಷ್ಟ, ದುಃಖ ಮತ್ತು ಉಪದ್ರವಗಳಿಲ್ಲದ ಸ್ಥಳ.

26. ಒಳಿತಿನ ಮಾರ್ಗ ಹಿಡಿದವರಿಗೆ ಒಳಿತಿದೆ. ಇನ್ನೂ ಹೆಚ್ಚಿನ ಅನುಗ್ರಹವಿದೆ. ಅವರ ಮುಖಕ್ಕೆ ಕಳಂಕವಾಗಲಿ ಅವರಿಗೆ ಅವಮಾನವಾಗಲಿ ಆಗದು. ಅವರು ಸ್ವರ್ಗಕ್ಕೆ ಹಕ್ಕುದಾರರು. ಅಲ್ಲಿ ಅವರು ಸದಾಕಾಲ ವಾಸಿಸುವರು.

لِلَّذِينَ أَحْسَنُوا الْحُسْنَىٰ وَزِيَادَةٌ ۖ وَلَا
يَرْهَقُ وُجُوهَهُمْ قَتَرٌ وَلَا ذِلَّةٌ ۚ أُولَٰئِكَ
أَصْحَابُ الْجَنَّةِ ۖ هُمْ فِيهَا خَالِدُونَ ٢٦

27. ಪಾಪ ಗಳಿಸಿದವರು ಅವರ ಪಾಪಗಳಿಗೆ ತಕ್ಕಂತೆ ಪ್ರತಿಫಲ ಪಡೆಯುವರು. ಅವಮಾನವು ಅವರನ್ನಾವರಿಸುವುದು. ಅವರನ್ನು ಅಲ್ಲಾಹನಿಂದ ರಕ್ಷಿಸುವವನಾರೂ ಇರಲಾರನು. ಅವರ ಮುಖಗಳ ಮೇಲೆ ನಿಶಾಂಧಕಾರದ ಕಪ್ಪು ಪರದೆಗಳು ಬಿದ್ದಿರುವಂತೆ ಕತ್ತಲೆ ಕವಿದಿರುವುದು. ಅವರು ನರಕಕ್ಕೇ ಹಕ್ಕುದಾರರು. ಅದರಲ್ಲಿ ಅವರು ಸದಾಕಾಲ ವಾಸಿಸುವರು.

وَالَّذِينَ كَسَبُوا السَّيِّئَاتِ جَزَاءُ سَيِّئَةٍ
بِمِثْلِهَا وَتَرْهَقُهُمْ ذِلَّةٌ ۖ مَا لَهُمْ مِنَ
اللَّهِ مِنْ عَاصِمٍ ۖ كَأَنَّمَا أُغْشِيَتْ وُجُوهُهُمْ
قِطَعًا مِنَ اللَّيْلِ مُظْلِمًا ۚ أُولَٰئِكَ أَصْحَابُ
النَّارِ ۖ هُمْ فِيهَا خَالِدُونَ ٢٧

28. ನಾವು ಅವರೆಲ್ಲರನ್ನೂ ಒಟ್ಟಾಗಿ (ನಮ್ಮ ನ್ಯಾಯಾಲಯದಲ್ಲಿ) ಸೇರಿಸುವ ದಿನ, ಬಹುದೇವಾರಾಧನೆ ಮಾಡಿದವರೊಡನೆ, ನೀವೂ (ದೇವತ್ವದಲ್ಲಿ) ನೀವು ಮಾಡಿಕೊಂಡ ಸಹಭಾಗಿಗಳೂ ನಿಲ್ಲಿರೆಂದು ಹೇಳುವೆವು. ಆ ಬಳಿಕ ನಾವು ಅವರ ನಡುವಿನಿಂದ ಪರಕೀಯತೆಯ ಪರದೆಯನ್ನು ಸರಿಸಿಬಿಡುವೆವು.[9] ಅವರು ಮಾಡಿಕೊಂಡ ಸಹ ಭಾಗಿಗಳು ಹೇಳುವರು,- "ನೀವು ನಮ್ಮ ದಾಸ್ಯ-ಆರಾಧನೆಯನ್ನಂತೂ ಮಾಡುತ್ತಿರಲಿಲ್ಲ.

وَيَوْمَ نَحْشُرُهُمْ جَمِيعًا ثُمَّ نَقُولُ
لِلَّذِينَ أَشْرَكُوا مَكَانَكُمْ أَنْتُمْ وَشُرَكَاؤُكُمْ
فَزَيَّلْنَا بَيْنَهُمْ ۖ وَقَالَ شُرَكَاؤُهُمْ مَا
كُنْتُمْ إِيَّانَا تَعْبُدُونَ ٢٨

29. (ನೀವು ನಮ್ಮನ್ನು ಆರಾಧಿಸುತ್ತಿದ್ದರೂ) ನಾವು ನಿಮ್ಮ ದಾಸ್ಯ-ಆರಾಧನೆಯ ಬಗ್ಗೆ ಸಂಪೂರ್ಣ ಅಜ್ಞರಾಗಿದ್ದೆವೆಂಬುದಕ್ಕೆ ನಮ್ಮ ಮತ್ತು ನಿಮ್ಮ ನಡುವೆ ಅಲ್ಲಾಹನ ಸಾಕ್ಷ್ಯ ಸಾಕು."

فَكَفَىٰ بِاللَّهِ شَهِيدًا بَيْنَنَا وَبَيْنَكُمْ إِنْ
كُنَّا عَنْ عِبَادَتِكُمْ لَغَافِلِينَ ٢٩

30. ಆಗ ಪ್ರತಿಯೊಬ್ಬನು ತಾನು ಮಾಡಿದ ಕರ್ಮದ ಸವಿಯನ್ನುಣ್ಣುವನು. ಎಲ್ಲರೂ ತಮ್ಮ ನೈಜ ಒಡೆಯನಾದ ಅಲ್ಲಾಹನ ಕಡೆಗೆ ತಿರುಗಿಸಲ್ಪಡುವರು ಮತ್ತು ಅವರು ಸೃಷ್ಟಿಸಿಕೊಂಡ ಎಲ್ಲ ಸುಳ್ಳುಗಳೂ ಮಾಯವಾಗುವುವು.

هُنَالِكَ تَبْلُو كُلُّ نَفْسٍ مَا أَسْلَفَتْ
وَرُدُّوا إِلَى اللَّهِ مَوْلَاهُمُ الْحَقِّ ۖ وَضَلَّ
عَنْهُمْ مَا كَانُوا يَفْتَرُونَ ٣٠

النصف

31. ಅವರೊಡನೆ ಕೇಳಿರಿ- ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ನೀಡುತ್ತಿರುವವನಾರು? ಈ ಶ್ರವಣ ಮತ್ತು ದೃಕ್ಶಕ್ತಿಗಳು ಯಾರ ವಶದಲ್ಲಿವೆ? ನಿರ್ಜೀವಿಯಿಂದ

قُلْ مَنْ يَرْزُقُكُمْ مِنَ السَّمَاءِ وَالْأَرْضِ
أَمَّنْ يَمْلِكُ السَّمْعَ وَالْأَبْصَارَ وَمَنْ

9. ಅರ್ಥಾತ್- ಬಹುದೇವಾರಾಧಕರನ್ನು ಅವರ ಆರಾಧ್ಯರುಗಳು, ನಮ್ಮ ಆರಾಧನೆ ಮಾಡುತ್ತಿದ್ದವರು ಇವರೇ ಆಗಿದ್ದಾರೆ ಎಂದು ಗುರುತು ಹಚ್ಚುವರು. ಹಾಗೆಯೇ ಬಹುದೇವಾರಾಧಕರು, ನಾವು ಆರಾಧನೆ ಮಾಡುತ್ತಿದ್ದ ಆರಾಧ್ಯರುಗಳು ಇವರೇ ಆಗಿದ್ದಾರೆ ಎಂದೂ ಗುರುತು ಹಿಡಿಯುವರು.

ಸಜೀವಿಯನ್ನು ಸಜೀವಿಯಿಂದ ನಿರ್ಜೀವಿಯನ್ನೂ ಹೊರತರುವವನಾರು? ಈ ಜಗತ್ತಿನ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ನಡೆಸುತ್ತಿರುವವನಾರು? 'ಅಲ್ಲಾಹ್' ಎಂದೇ ಅವರು ಹೇಳುವರು. ಹೇಳಿರಿ - "ಹಾಗಿದ್ದರೂ ನೀವು (ಪರಮಾರ್ಥಕ್ಕೆ ವಿರುದ್ಧವಾಗಿ ನಡೆಯುವುದನ್ನು) ತೊರೆಯುವುದಿಲ್ಲವೇ?

يُخْرِجُ الْحَيَّ مِنَ الْمَيِّتِ وَيُخْرِجُ الْمَيِّتَ
مِنَ الْحَيِّ وَمَنْ يُدَبِّرُ الْأَمْرَ ۚ فَسَيَقُولُونَ
اللَّهُ ۚ فَقُلْ أَفَلَا تَتَّقُونَ ٣١

32. ನಿಜವಾಗಿ ಈ ಅಲ್ಲಾಹನೇ ನಿಮ್ಮ ಯಥಾರ್ಥ ಪ್ರಭು. ಇನ್ನು ಸತ್ಯದ ತರುವಾಯ ಪಥಭ್ರಷ್ಟತೆಯ ವಿನಾ ಬೇರೇನು ಉಳಿದಿದೆ? ನೀವೆತ್ತ ಅಲೆದಾಡಿಸಲ್ಪಡುತ್ತಿರುವಿರಿ?[10]

فَذَٰلِكُمُ اللَّهُ رَبُّكُمُ الْحَقُّ ۖ فَمَاذَا بَعْدَ
الْحَقِّ إِلَّا الضَّلَالُ ۖ فَأَنَّىٰ تُصْرَفُونَ ٣٢

33. ಹೀಗೆ, ಕರ್ಮಭ್ರಷ್ಟರು ವಿಶ್ವಾಸವಿರಿಸಲಾರರೆಂದು ನಿಮ್ಮ ಪ್ರಭು ಹೇಳಿದ ಮಾತು ನಿಜವಾಯಿತು.

كَذَٰلِكَ حَقَّتْ كَلِمَتُ رَبِّكَ عَلَى الَّذِينَ
فَسَقُوا أَنَّهُمْ لَا يُؤْمِنُونَ ٣٣

34. "ನೀವಿರಿಸಿಕೊಂಡಿರುವ ಸಹಭಾಗಿಗಳ ಪೈಕಿ ಸೃಷ್ಟಿಯ ಆರಂಭ ಮಾಡುವವನೂ ಅದನ್ನು ಪುನರಾವರ್ತಿಸುವವನೂ ಯಾರಾದರೂ ಇದ್ದಾನೆಯೇ?" ಎಂದು ಇವರೊಡನೆ ಕೇಳಿರಿ. ಹೇಳಿರಿ- "ಸೃಷ್ಟಿಯನ್ನು ಆರಂಭಿಸುವವನೂ ಅದನ್ನು ಪುನರಾವರ್ತಿಸುವವನೂ ಕೇವಲ ಅಲ್ಲಾಹನೇ. ಹೀಗಿರುತ್ತ ನೀವು ಇದಾವ ತದ್ವಿರುದ್ಧ ಮಾರ್ಗದಲ್ಲಿ ನಡೆಸಲ್ಪಡುತ್ತಿರುವಿರಿ?"

قُلْ هَلْ مِنْ شُرَكَائِكُمْ مَنْ يَبْدَأُ
الْخَلْقَ ثُمَّ يُعِيدُهُ ۚ قُلِ اللَّهُ يَبْدَأُ الْخَلْقَ
ثُمَّ يُعِيدُهُ ۖ فَأَنَّىٰ تُؤْفَكُونَ ٣٤

35. "ನೀವಿರಿಸಿಕೊಂಡಿರುವ ಸಹಭಾಗಿಗಳ ಪೈಕಿ ಯಾರಾದರೂ ಸತ್ಯದ ಕಡೆಗೆ ಮಾರ್ಗದರ್ಶನ ನೀಡುವವನೂ ಇದ್ದಾನೆಯೇ?" ಎಂದು ಇವರೊಡನೆ ಕೇಳಿರಿ. ಹೇಳಿರಿ- "ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಕೇವಲ ಅಲ್ಲಾಹನೇ. ಹೀಗಿರುತ್ತ ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಅನುಸರಣೆಗೆ ಹೆಚ್ಚು ಅರ್ಹನೋ ಅಥವಾ ತನಗೆ ಮಾರ್ಗದರ್ಶನ ಮಾಡಿಸದಿದ್ದರೆ ಸ್ವತಃ ಸನ್ಮಾರ್ಗ ಹೊಂದದವನು ಅನುಸರಣೆಗೆ ಹೆಚ್ಚು ಅರ್ಹನೋ? ನಿಮಗೇನಾಗಿ ಬಿಟ್ಟಿದೆ? ನೀವೆಂತಹ ತದ್ವಿರುದ್ಧ ತೀರ್ಮಾನ ಕೈಗೊಳ್ಳುತ್ತೀರಿ?"

قُلْ هَلْ مِنْ شُرَكَائِكُمْ مَنْ يَهْدِي
إِلَى الْحَقِّ ۚ قُلِ اللَّهُ يَهْدِي لِلْحَقِّ ۗ أَفَمَنْ
يَهْدِي إِلَى الْحَقِّ أَحَقُّ أَنْ يُتَّبَعَ أَمَّنْ لَا
يَهِدِّي إِلَّا أَنْ يُهْدَىٰ ۖ فَمَا لَكُمْ
كَيْفَ تَحْكُمُونَ ٣٥

10. ಜನಸಾಮಾನ್ಯರನ್ನುದ್ದೇಶಿಸಿ ಈ ಮಾತು ಹೇಳಲಾಗುತ್ತಿದೆ ಎಂಬುದು ಗಮನಾರ್ಹ. ನೀವು ಯಾವ ಕಡೆಗೆ ತಿರುಗುತ್ತಿದ್ದೀರಿ ಎಂದು ಅವರೊಡನೆ ಕೇಳಲಾಗುತ್ತಿಲ್ಲ. ಬದಲಾಗಿ, "ಯಾವ ಕಡೆಗೆ ತಿರುಗಿಸಲ್ಪಡುತ್ತಿದ್ದೀರಿ?" ಎಂದು ಕೇಳಲಾಗುತ್ತಿದೆ. ಇದರಿಂದ ಜನರನ್ನು ಸನ್ಮಾರ್ಗದಿಂದ ದೂರಸರಿಸಿ ದುರ್ಮಾರ್ಗದ ಕಡೆಗೆ ತಿರುಗಿಸುವಂತಹ ವ್ಯಕ್ತಿ ಅಥವಾ ಸಮೂಹ ಅಸ್ತಿತ್ವದಲ್ಲಿದೆ ಎಂದು ವ್ಯಕ್ತವಾಗುತ್ತದೆ. ಆದ್ದರಿಂದಲೇ ಕುರುಡರಂತೆ ನೀವು ಪಥಭ್ರಷ್ಟಗೊಳಿಸುವವರ ಹಿಂದೆ ಯಾಕೆ ಹೋಗುತ್ತಿದ್ದೀರಿ ಎಂದು ಕೇಳಲಾಗುತ್ತಿದೆ. 'ವಾಸ್ತವಿಕತೆ ಹೀಗಿರುವಾಗ ನೀವು ಹೋಗುತ್ತಿರುವುದಾದರೂ ಯಾವ ಕಡೆಗೆ? ನಿಮ್ಮ ವಿವೇಕವನ್ನು ಉಪಯೋಗಿಸಿ ನೀವು ಆಲೋಚಿಸುವುದಿಲ್ಲವೇಕೆ?' ಎನ್ನಲಾಗುತ್ತಿದೆ.

36. ವಾಸ್ತವದಲ್ಲಿ ಅವರ ಪೈಕಿ ಹೆಚ್ಚಿನವರು ಊಹೆ ಮತ್ತು ಗುಮಾನಿಗಳನ್ನು ಮಾತ್ರ ಹಿಂಬಾಲಿಸುತ್ತಾರೆ.[11] ವಸ್ತುತಃ ಗುಮಾನಿಯು ಸತ್ಯದ ಅವಶ್ಯಕತೆಯನ್ನು ಎಷ್ಟಕ್ಕೂ ಪೂರೈಸುವುದಿಲ್ಲ. ಇವರು ಮಾಡುತ್ತಿರುವುದನ್ನೆಲ್ಲಾ ಅಲ್ಲಾಹನು ಚೆನ್ನಾಗಿ ಅರಿಯುತ್ತಾನೆ.

وَمَا يَتَّبِعُ أَكْثَرُهُمْ إِلَّا ظَنًّا ۚ إِنَّ الظَّنَّ لَا يُغْنِي مِنَ الْحَقِّ شَيْئًا ۚ إِنَّ اللَّهَ عَلِيمٌ بِمَا يَفْعَلُونَ ﴿٣٦﴾

37. ಈ ಕುರ್‌ಆನ್ ಅಲ್ಲಾಹನ 'ದಿವ್ಯವಾಣಿ' ಮತ್ತು ಬೋಧನೆಯ ಹೊರತು ರಚಿಸಲ್ಪಡುವಂತಹ ವಸ್ತುವಲ್ಲ. ನಿಜವಾಗಿ ಇದು ಹಿಂದೆ ಬಂದಿದ್ದುದರ ದೃಢೀಕರಣವೂ ಪರಮ ಗ್ರಂಥದ ವಿವರಣೆಯೂ ಆಗಿರುತ್ತದೆ. ಇದು ಸರ್ವಲೋಕಾಧಿಪತಿಯ ಕಡೆಯಿಂದ ಬಂದಿರುವುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

وَمَا كَانَ هَٰذَا الْقُرْآنُ أَنْ يُفْتَرَىٰ مِنْ دُونِ اللَّهِ وَلَٰكِنْ تَصْدِيقَ الَّذِي بَيْنَ يَدَيْهِ وَتَفْصِيلَ الْكِتَابِ لَا رَيْبَ فِيهِ مِنْ رَبِّ الْعَالَمِينَ ﴿٣٧﴾

38. ಇದನ್ನು ಪೈಗಂಬರರು ಸ್ವತಃ ರಚಿಸಿಕೊಂಡರೆಂದು ಇವರು ಹೇಳುತ್ತಾರೆಯೇ? ಹೇಳಿರಿ;- "ನೀವು ನಿಮ್ಮ ಈ ಆಪಾದನೆಯ ಬಗ್ಗೆ ಸತ್ಯವಾದಿಗಳಾಗಿದ್ದರೆ ಇದರಂತಿರುವ ಒಂದು ಅಧ್ಯಾಯವನ್ನು ರಚಿಸಿ ತನ್ನಿರಿ ಮತ್ತು ಅಲ್ಲಾಹನೋರ್ವನನ್ನು ಬಿಟ್ಟು ಯಾರನ್ನೆಲ್ಲ ಸಹಾಯಕ್ಕಾಗಿ ಕರೆಯಲು ಸಾಧ್ಯವಿದೆಯೋ ಅವರನ್ನೆಲ್ಲ ಕರೆದುಕೊಳ್ಳಿರಿ."

أَمْ يَقُولُونَ افْتَرَاهُ ۖ قُلْ فَأْتُوا بِسُورَةٍ مِثْلِهِ وَادْعُوا مَنِ اسْتَطَعْتُمْ مِنْ دُونِ اللَّهِ إِنْ كُنْتُمْ صَادِقِينَ ﴿٣٨﴾

39. ವಾಸ್ತವದಲ್ಲಿ ಯಾವುದು ಇವರ ಜ್ಞಾನದ ಹಿಡಿತಕ್ಕೆ ಸಿಗಲಿಲ್ಲವೋ ಮತ್ತು ಯಾವುದರ ಕ್ರಿಯಾಫಲವು ಇವರ ಮುಂದೆ ಬರಲಿಲ್ಲವೋ ಅದನ್ನು ಇವರು (ವೃಥಾ ಅನುಮಾನದಿಂದಲೇ) ಸುಳ್ಳಾಗಿಸಿದರು. ಇದೇ ರೀತಿಯಲ್ಲಿ ಇವರ ಪೂರ್ವಿಕರೂ ಸುಳ್ಳಾಗಿಸಿದ್ದರು. ಅನಂತರ ಆ ಅಕ್ರಮಿಗಳ ಪರಿಣಾಮವೇನಾಯಿತೆಂಬುದನ್ನು ನೋಡಿರಿ.

بَلْ كَذَّبُوا بِمَا لَمْ يُحِيطُوا بِعِلْمِهِ وَلَمَّا يَأْتِهِمْ تَأْوِيلُهُ ۚ كَذَٰلِكَ كَذَّبَ الَّذِينَ مِنْ قَبْلِهِمْ ۖ فَانْظُرْ كَيْفَ كَانَ عَاقِبَةُ الظَّالِمِينَ ﴿٣٩﴾

40. ಇವರಲ್ಲಿ ಕೆಲವರು ವಿಶ್ವಾಸವಿರಿಸುವರು ಮತ್ತು ಇನ್ನು ಕೆಲವರು ವಿಶ್ವಾಸವಿರಿಸಲಾರರು. ನಿಮ್ಮ ಪ್ರಭು ಈ ಕಿಡಿಗೇಡಿಗಳನ್ನು ಚೆನ್ನಾಗಿ ಬಲ್ಲವನಾಗಿರುತ್ತಾನೆ.

وَمِنْهُمْ مَنْ يُؤْمِنُ بِهِ وَمِنْهُمْ مَنْ لَا يُؤْمِنُ بِهِ ۚ وَرَبُّكَ أَعْلَمُ بِالْمُفْسِدِينَ ﴿٤٠﴾

11. ಅರ್ಥಾತ್- ಧರ್ಮಗಳನ್ನು ಸ್ಥಾಪಿಸಿದ, ತತ್ವಶಾಸ್ತ್ರಗಳನ್ನು ಹೆಣೆದ ಮತ್ತು ಜೀವನದ ನಿಯಮಗಳನ್ನು ರೂಪಿಸಿದ ವ್ಯಕ್ತಿಗಳೂ ಕಲ್ಪನೆ ಮತ್ತು ಭ್ರಮೆಗಳ ಆಧಾರದಲ್ಲೇ ಅದನ್ನು ರಚಿಸಿದರು. ಜ್ಞಾನದ ಆಧಾರದಲ್ಲಲ್ಲ. ಈ ಧಾರ್ಮಿಕ ಮತ್ತು ಲೌಕಿಕ ಮಾರ್ಗದರ್ಶಿಗಳನ್ನು ಅನುಸರಿಸುತ್ತಿರುವವರೂ ತಿಳುವಳಿಕೆ ಮತ್ತು ಜ್ಞಾನದಿಂದಾಗಿಯಲ್ಲ. ಬದಲಾಗಿ ಗುಮಾನಿಯ ಆಧಾರದಲ್ಲೇ ಅವರನ್ನು ಅನುಸರಿಸುತ್ತಿದ್ದಾರೆ. ಇಂತಹ ಮಹಾನ್ ವ್ಯಕ್ತಿಗಳು ಹೀಗೆ ಹೇಳುತ್ತಿರ ಬೇಕಾದರೆ ನನ್ನ ತಾತ ಮುತ್ತಾತಂದಿರು ಅದನ್ನು ಪಾಲಿಸುತ್ತಾ ಬಂದಿರಬೇಕಾದರೆ ಮತ್ತು ಇಡೀ ಲೋಕವೇ ಅವರನ್ನು ಅನುಸರಿಸುತ್ತಿರಬೇಕಾದರೆ ಅವರು ಹೇಳುತ್ತಿರುವುದು ನಿಜವೇ ಆಗಿರಬಹುದು ಎಂಬುದು ಅವರ ಕಲ್ಪನೆ.

41. ಇವರು ನಿಮ್ಮನ್ನು ಸುಳ್ಳಾಗಿಸುತ್ತಿದ್ದರೆ, ಹೇಳಿರಿ; - "ನನ್ನ ಕರ್ಮ ನನಗೆ ಮತ್ತು ನಿಮ್ಮ ಕರ್ಮ ನಿಮಗೆ. ನಾನು ಮಾಡುತ್ತಿರುವ ಯಾವುದೇ ಕರ್ಮದ ಹೊಣೆಯಿಂದ ನೀವು ಮುಕ್ತರು. ನೀವು ಮಾಡುತ್ತಿರುವ ಯಾವುದೇ ಕರ್ಮದ ಹೊಣೆಯಿಂದ ನಾನು ಮುಕ್ತನು."[12]

وَإِن كَذَّبُوكَ فَقُل لِّي عَمَلِي وَلَكُمْ
عَمَلُكُمْ ۖ أَنتُم بَرِيئُونَ مِمَّا أَعْمَلُ
وَأَنَا بَرِيءٌ مِّمَّا تَعْمَلُونَ ﴿٤١﴾

42. ಇವರಲ್ಲಿ ಅನೇಕರು ನಿಮ್ಮ ಮಾತುಗಳನ್ನು ಕೇಳುತ್ತಾರೆ. ಆದರೆ ಕಿವುಡರು ಏನನ್ನೂ ಗ್ರಹಿಸದಿದ್ದರೂ ನೀವು ಅವರಿಗೆ ಕೇಳಿ ಸುವಿರಾ?[13]

وَمِنْهُم مَّن يَسْتَمِعُونَ إِلَيْكَ ۚ أَفَأَنتَ
تُسْمِعُ الصُّمَّ وَلَوْ كَانُوا لَا يَعْقِلُونَ ﴿٤٢﴾

43. ಇವರಲ್ಲಿ ಅನೇಕರು ನಿಮ್ಮತ್ತ ನೋಡುತ್ತಾರೆ. ಆದರೆ ಕುರುಡರಿಗೆ ಏನೂ ಹೊಳೆಯದಿದ್ದರೂ ನೀವು ಅವರಿಗೆ ಮಾರ್ಗದರ್ಶನ ಮಾಡುವಿರಾ?

وَمِنْهُم مَّن يَنظُرُ إِلَيْكَ ۚ أَفَأَنتَ
تَهْدِي الْعُمْيَ وَلَوْ كَانُوا لَا يُبْصِرُونَ ﴿٤٣﴾

44. ವಾಸ್ತವದಲ್ಲಿ ಅಲ್ಲಾಹನು ಜನರ ಮೇಲೆ ಅಕ್ರಮವೆಸಗುವುದಿಲ್ಲ. ಜನರು ತಾವೇ ತಮ್ಮ ಮೇಲೆ ಅಕ್ರಮವೆಸಗಿಕೊಳ್ಳುತ್ತಾರೆ.

إِنَّ اللَّهَ لَا يَظْلِمُ النَّاسَ شَيْئًا وَلَٰكِنَّ
النَّاسَ أَنفُسَهُمْ يَظْلِمُونَ ﴿٤٤﴾

45. (ಇಂದು ಇವರು ಐಹಿಕ ಜೀವನದಲ್ಲಿ ಉನ್ಮತ್ತರಾಗಿದ್ದಾರೆ) ಅಲ್ಲಾಹನು ಇವರನ್ನು ಒಟ್ಟು ಸೇರಿಸುವ ದಿನ (ಇದೇ ಐಹಿಕ ಜೀವನವು) ಇವರಿಗೆ ಹಗಲಿನ ಒಂದು ಕ್ಷಣಕಾಲ ಪರಸ್ಪರ ಪರಿ ಚಯ ಮಾಡಿಕೊಳ್ಳಲಿಕ್ಕಾಗಿ ತಾವು ತಂಗಿದ್ದಂತೆ (ಭಾಸವಾಗುವುದು) ಅಲ್ಲಾಹನೊಡನೆ ಭೇಟಿಯನ್ನು ಸುಳ್ಳಾಗಿಸಿದವರು ನಿಜಕ್ಕೂ ನಷ್ಟಹೊಂದಿದರೆಂದೂ ಅವರು ಸನ್ಮಾರ್ಗದಲ್ಲಿರಲಿಲ್ಲವೆಂದೂ (ಆಗ ಅವರಿಗೆ ಖಚಿತವಾಗುವುದು).

وَيَوْمَ يَحْشُرُهُمْ كَأَن لَّمْ يَلْبَثُوا إِلَّا
سَاعَةً مِّنَ النَّهَارِ يَتَعَارَفُونَ بَيْنَهُمْ ۚ
قَدْ خَسِرَ الَّذِينَ كَذَّبُوا بِلِقَاءِ اللَّهِ
وَمَا كَانُوا مُهْتَدِينَ ﴿٤٥﴾

46. ಯಾವ ದುಷ್ಪರಿಣಾಮಗಳಿಂದ ನಾವು ಅವರನ್ನು ಹೆದರಿಸುತ್ತೇವೋ ಅದರ ಒಂದಂಶವನ್ನು ನಾವು ನಿಮ್ಮ ಜೀವಮಾನದಲ್ಲೇ ನಿಮಗೆ ತೋರಿಸಬಹುದು ಅಥವಾ ಅದಕ್ಕಿಂತ ಮುಂಚೆಯೇ ನಿಮ್ಮನ್ನು ಎತ್ತಿಕೊಳ್ಳಬಹುದು. ಹೇಗಿದ್ದರೂ ಇವರಿಗೆ ನಮ್ಮ ಕಡೆಗೆ ಬರಲಿಕ್ಕಿದೆ. ಇವರು ಏನೆಲ್ಲ ಮಾಡುತ್ತಿರುವರೋ ಅದರ ಬಗ್ಗೆ ಅಲ್ಲಾಹ್ ಸಾಕ್ಷಿಯಾಗಿರುತ್ತಾನೆ.

وَإِمَّا نُرِيَنَّكَ بَعْضَ الَّذِي نَعِدُهُمْ
أَوْ نَتَوَفَّيَنَّكَ فَإِلَيْنَا مَرْجِعُهُمْ ثُمَّ اللَّهُ
شَهِيدٌ عَلَىٰ مَا يَفْعَلُونَ ﴿٤٦﴾

12. ಅರ್ಥಾತ್- ನಿರರ್ಥಕ ಜಗಳ ಕಾಯುವ ಮತ್ತು ಚರ್ಚೆಗಳನ್ನು ನಡೆಸುವ ಅವಶ್ಯಕತೆಯಿಲ್ಲ. ನಾನು ಸುಳ್ಳಾರೋಪ ಹೊರಿಸುತ್ತಿದ್ದರೆ ಅದಕ್ಕೆ ನಾನೇ ಹೊಣೆಗಾರ. ನಿಮ್ಮ ಮೇಲೆ ಅದರ ಯಾವ ಜವಾಬ್ದಾರಿಕೆಯೂ ಇಲ್ಲ. ನೀವು ಸತ್ಯವನ್ನು ತಿರುಚುವ ಮೂಲಕ ನನಗೆ ಯಾವ ಹಾನಿಯನ್ನೂ ಉಂಟು ಮಾಡಲಾರಿರಿ. ನಿಮಗೇ ನೀವು ನಷ್ಟ ಉಂಟು ಮಾಡಿಕೊಳ್ಳುತ್ತಿದ್ದೀರಷ್ಟೆ.

13. ಪ್ರಾಣಿಗಳು ಶಬ್ದವನ್ನು ಕೇಳಿಸಿಕೊಳ್ಳುವಂತೆ ಕೇಳಿಸಿಕೊಳ್ಳುವುದು ಒಂದು ವಿಧವಾಗಿದೆ. ಇನ್ನೊಂದು ವಿಧ, ಅರ್ಥದ ಕಡೆಗೆ ಗಮನ ಹರಿಸಿ ವಿಷಯ ಸಮರ್ಪಕವಾದುದಾದರೆ ಅದನ್ನು ಸಮ್ಮತಿಸುವ ಸನ್ನದ್ಧತೆಯೊಂದಿಗೆ ಕೇಳುವುದಾಗಿದೆ.

47. ಪ್ರತಿಯೊಂದು 'ಸಮುದಾಯ'ಕ್ಕೆ ಓರ್ವ ರಸೂಲನಿದ್ದಾನೆ.[14] ಒಂದು ಸಮುದಾಯದ ಬಳಿಗೆ ಅದರ ರಸೂಲ್ ಬಂದಾಗ ಅದರ ತೀರ್ಮಾನವನ್ನು ನ್ಯಾಯಪೂರ್ಣವಾಗಿ ಮಾಡಿಬಿಡಲಾಗುತ್ತದೆ ಮತ್ತು ಅದರ ಮೇಲೆ ಕಿಂಚಿತ್ತೂ ಅಕ್ರಮವೆಸಗಲಾಗುವುದಿಲ್ಲ.

وَلِكُلِّ أُمَّةٍ رَّسُولٌ ۖ فَإِذَا جَاءَ رَسُولُهُمْ قُضِيَ بَيْنَهُم بِالْقِسْطِ وَهُمْ لَا يُظْلَمُونَ ﴿٤٧﴾

48. "ನಿಮ್ಮ ಈ ಬೆದರಿಕೆಯು ನಿಜವಾಗಿದ್ದರೆ ಇದು ಪೂರ್ಣಗೊಳ್ಳುವುದು ಯಾವಾಗ?" ಎನ್ನುತ್ತಾರೆ.

وَيَقُولُونَ مَتَىٰ هَٰذَا الْوَعْدُ إِن كُنتُمْ صَادِقِينَ ﴿٤٨﴾

49. ಹೇಳಿರಿ, "ಸ್ವತಃ ನನ್ನ ಲಾಭ-ಹಾನಿಗಳೂ ನನ್ನ ಅಧಿಕಾರದಲ್ಲಿಲ್ಲ. ಎಲ್ಲವೂ ಅಲ್ಲಾಹನ ವಿಧಿಯನ್ನು ಹೊಂದಿಕೊಂಡಿದೆ. ಪ್ರತಿಯೊಂದು ಸಮುದಾಯಕ್ಕೂ ಒಂದು ನಿಶ್ಚಿತ ಕಾಲಾವಧಿ ಇದೆ. ಈ ಕಾಲಾವಧಿ ಮುಗಿದಾಗ ಕ್ಷಣ ಮಾತ್ರವೂ ಹಿಂದು ಮುಂದಾಗುವುದಿಲ್ಲ."

قُل لَّا أَمْلِكُ لِنَفْسِي ضَرًّا وَلَا نَفْعًا إِلَّا مَا شَاءَ اللَّهُ ۗ لِكُلِّ أُمَّةٍ أَجَلٌ ۚ إِذَا جَاءَ أَجَلُهُمْ فَلَا يَسْتَأْخِرُونَ سَاعَةً ۖ وَلَا يَسْتَقْدِمُونَ ﴿٤٩﴾

50. ಇವರೊಡನೆ ಹೇಳಿರಿ;- ಅಲ್ಲಾಹನ ಯಾತನೆಯು ರಾತ್ರೆ ಅಥವಾ ಹಗಲಲ್ಲಿ ಹಠಾತ್ತನೆ ಬಂದೆರಗಿ ಬಿಟ್ಟರೆ (ನೀವು ಏನು ಮಾಡಬಲ್ಲಿರಿ) ಎಂಬುದನ್ನು ಯೋಚಿಸಿದಿರಾ? ಅಪರಾಧಿಗಳು ಇದರಲ್ಲಿ ತವಕಪಡುವ ವಿಷಯವಾದರೂ ಏನಿದೆ?

قُلْ أَرَأَيْتُمْ إِنْ أَتَاكُمْ عَذَابُهُ بَيَاتًا أَوْ نَهَارًا مَّاذَا يَسْتَعْجِلُ مِنْهُ الْمُجْرِمُونَ ﴿٥٠﴾

51. ಅದು ನಿಮ್ಮ ಮೇಲೆ ಬಂದೆರಗಿದ ಅನಂತರವೇ ನೀವು ಅದನ್ನು ನಂಬುವಿರಾ? ಈಗ ತಪ್ಪಿಸಿಕೊಳ್ಳಲಿಚ್ಛಿಸುತ್ತೀರಾ? ವಸ್ತುತಃ ನೀವೇ ಅದು ಬೇಗನೆ ಬರಬೇಕೆಂಬ ತರಾತುರಿಯಲ್ಲಿದ್ದಿರಿ.

أَثُمَّ إِذَا مَا وَقَعَ آمَنتُم بِهِ ۚ آلْآنَ وَقَدْ كُنتُم بِهِ تَسْتَعْجِلُونَ ﴿٥١﴾

52. ಆ ಬಳಿಕ ಅಕ್ರಮಿಗಳೊಡನೆ (ಹೀಗೆ) ಹೇಳಲಾಗುವುದು. ಇನ್ನು ಅನಂತ ಕಾಲದ ಯಾತನೆಯನ್ನು ಸವಿಯಿರಿ. ನೀವು ಗಳಿಸುತ್ತಿದ್ದುದರ ಪ್ರತಿಫಲದ ಹೊರತು ಇನ್ನಾವ ಪ್ರತಿಫಲವನ್ನು ನಿಮಗೆ ಕೊಡಲು ಸಾಧ್ಯ?

ثُمَّ قِيلَ لِلَّذِينَ ظَلَمُوا ذُوقُوا عَذَابَ الْخُلْدِ هَلْ تُجْزَوْنَ إِلَّا بِمَا كُنتُمْ تَكْسِبُونَ ﴿٥٢﴾

14. 'ಉಮ್ಮತ್' ಎಂಬ ಪದವನ್ನು ಇಲ್ಲಿ ಒಂದು ಜನಾಂಗ ಎಂಬ ಅರ್ಥದಲ್ಲಿ ಪ್ರಯೋಗಿಸಲಾಗಿಲ್ಲ. ಪ್ರವಾದಿಯ ಆಗಮನದ ನಂತರ ಅವರ ಸಂದೇಶ ಯಾರ್‍ಯಾರಿಗೆ ತಲಪುತ್ತದೋ ಅವರೆಲ್ಲರೂ ಪ್ರವಾದಿಯ 'ಉಮ್ಮತ್'ನಲ್ಲಿ ಸೇರಿದ್ದಾರೆ. ಅದಕ್ಕಾಗಿ ಪ್ರವಾದಿಯವರು ಅವರ ನಡುವೆ ಜೀವಂತ ಇರಬೇಕಾಗಿಯೂ ಇಲ್ಲ. ಅವರ ಬೋಧನೆಗಳು ಅಸ್ತಿತ್ವದಲ್ಲಿರುವಷ್ಟು ಕಾಲ ಮತ್ತು ಅವರು ಯಾವುದರ ಬೋಧನೆ ಕೊಡುತ್ತಿದ್ದಾರೆಂದು ಪ್ರತಿಯೊಬ್ಬನಿಗೂ ತಿಳಿಯಲು ಸಾಧ್ಯವಿರುವಷ್ಟು ಕಾಲ, ಲೋಕದ ಜನರೆಲ್ಲರೂ ಅವರ 'ಉಮ್ಮತ್' ಎಂದು ಪರಿಗಣಿಸಲ್ಪಡುವರು. ಮುಂದೆ ಬರುತ್ತಿರುವ ಆದೇಶಗಳು ಅವರೆಲ್ಲರಿಗೂ ಅನ್ವಯವಾಗುವುದು. ಈ ಅರ್ಥದಲ್ಲಿ ಮುಹಮ್ಮದ್‌ರ(ಸ) ಆಗಮನದ ನಂತರ ಲೋಕದಲ್ಲಿರುವ ಮಾನವರೆಲ್ಲರೂ ಅವರ ಉಮ್ಮತಿಗಳಾಗಿದ್ದಾರೆ. ಕುರ್‌ಆನ್ ತನ್ನ ನೈಜ ರೂಪದಲ್ಲಿ ಇರುವಷ್ಟು ಕಾಲವೂ ಅವರು ಉಮ್ಮತಿಗಳಾಗಿಯೇ ಇರುವರು. ಆದ್ದರಿಂದಲೇ ಸೂಕ್ತದಲ್ಲಿ "ಪ್ರತಿಯೊಂದು ಜನಾಂಗಕ್ಕೂ ಓರ್ವ ಪ್ರವಾದಿ ಇದ್ದಾರೆ" ಎಂದು ಹೇಳಲಾಗಿಲ್ಲ. ಬದಲಾಗಿ "ಪ್ರತಿಯೊಂದು ಉಮ್ಮತ್‌ಗೆ ಓರ್ವ ಪ್ರವಾದಿ ಇದ್ದಾರೆ" ಎಂದು ಹೇಳಲಾಗಿದೆ.

53. "ನೀವು ಹೇಳುತ್ತಿರುವುದು ನಿಜಕ್ಕೂ ಸತ್ಯವೇ?" ಎಂದು ಕೇಳುತ್ತಾರೆ. ಹೇಳಿರಿ; "ನನ್ನ ಪ್ರಭುವಿನಾಣೆ, ಇದು ಖಂಡಿತವಾಗಿಯೂ ಸತ್ಯ. ಅದು ಸಂಭವಿಸುವುದನ್ನು ತಡೆಯುವಷ್ಟು ಸಾಮರ್ಥ್ಯ ನಿಮಗಿಲ್ಲ."

وَيَسْتَنْۢبِـُٔوْنَكَ اَحَقٌّ هُوَ ؕ قُلْ اِیْ وَرَبِّیْٓ
اِنَّهٗ لَحَقٌّ ؕؔ وَمَآ اَنْتُمْ بِمُعْجِزِیْنَ ۝٥٣

54. ಅಕ್ರಮವೆಸಗಿದ ಪ್ರತಿಯೊಬ್ಬನ ಬಳಿ ಭೂಮಿಯ ಸಕಲ ಸಂಪತ್ತು ಇದ್ದರೂ ಆ ಯಾತನೆಯಿಂದ ಪಾರಾಗಲಿಕ್ಕಾಗಿ ಅವನು ಅದನ್ನೆಲ್ಲ ಪರಿಹಾರವಾಗಿ ಕೊಡಲು ಸಿದ್ಧನಾಗುವನು. ಇವರು ಆ ಯಾತನೆಯನ್ನು ಕಂಡಾಗ ಮನದೊಳಗೇ ಮರುಗುವರು. ಆದರೆ ಅವರ ನಡುವೆ ನ್ಯಾಯಪೂರ್ಣವಾದ ತೀರ್ಮಾನ ಕೈಕೊಳ್ಳಲಾಗುವುದು. ಅವರ ಮೇಲೆ ಯಾವ ಅಕ್ರಮವೂ ಆಗಲಾರದು.

وَلَوْ اَنَّ لِكُلِّ نَفْسٍ ظَلَمَتْ مَا فِی الْاَرْضِ
لَافْتَدَتْ بِهٖ ؕ وَاَسَرُّوا النَّدَامَةَ لَمَّا
رَاَوُا الْعَذَابَ ۚ وَقُضِیَ بَیْنَهُمْ بِالْقِسْطِ
وَهُمْ لَا یُظْلَمُوْنَ ۝٥٤

55. ಕೇಳಿರಿ! ಆಕಾಶಗಳಲ್ಲೂ ಭೂಮಿಯಲ್ಲೂ ಇರುವುದೆಲ್ಲವೂ ಅಲ್ಲಾಹನದೇ. ಕೇಳಿರಿ, ಅಲ್ಲಾಹನ ವಾಗ್ದಾನ ಸತ್ಯವಾದುದು. ಆದರೆ ಹೆಚ್ಚಿನವರು ಅರಿತಿರುವುದಿಲ್ಲ.

اَلَآ اِنَّ لِلّٰهِ مَا فِی السَّمٰوٰتِ وَالْاَرْضِ ؕ
اَلَآ اِنَّ وَعْدَ اللّٰهِ حَقٌّ وَّلٰكِنَّ اَكْثَرَهُمْ
لَا یَعْلَمُوْنَ ۝٥٥

56. ಅವನೇ ಜೀವದಾನ ಮಾಡುತ್ತಾನೆ ಅವನೇ ಮರಣ ಕೊಡುತ್ತಾನೆ. ಮತ್ತು ನಿಮಗೆಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ.

هُوَ یُحْیٖ وَیُمِیْتُ وَاِلَیْهِ تُرْجَعُوْنَ ۝٥٦

57. ಜನರೇ! ನಿಮ್ಮ ಪ್ರಭುವಿನ ಕಡೆಯಿಂದ ನಿಮಗೊಂದು ಉಪದೇಶ ಬಂದಿದೆ. ಇದು ಮನಸ್ಸುಗಳೊಳಗಿನ ಕಾಯಿಲೆಗಳ ಗುಣೌಷಧ ವಾಗಿದೆ ಮತ್ತು ಅದನ್ನು ಸ್ವೀಕರಿಸಿಕೊಂಡವರಿಗೆ ಸನ್ಮಾರ್ಗ ದರ್ಶನವೂ ಕೃಪೆಯೂ ಆಗಿರುತ್ತದೆ.

یٰۤاَیُّهَا النَّاسُ قَدْ جَآءَتْكُمْ مَّوْعِظَةٌ مِّنْ
رَّبِّكُمْ وَشِفَآءٌ لِّمَا فِی الصُّدُوْرِ ۙ۬
وَهُدًی وَّرَحْمَةٌ لِّلْمُؤْمِنِیْنَ ۝٥٧

58. ಓ ಪೈಗಂಬರರೇ, (ಹೀಗೆ) ಹೇಳಿರಿ: "ಇದನ್ನು ಅವತೀರ್ಣಗೊಳಿಸಿದುದು ಅಲ್ಲಾಹನ ಅನುಗ್ರಹ ಮತ್ತು ಕೃಪೆಯಾಗಿರುತ್ತದೆ. ಇದಕ್ಕಾಗಿ ಜನರು ಸಂತೋಷ ಪಡಬೇಕು. ಜನರು ಶೇಖರಿಸುತ್ತಿರುವ ಎಲ್ಲ ವಸ್ತುಗಳಿಗಿಂತಲೂ ಇದು ಉತ್ತಮವಾಗಿದೆ."

قُلْ بِفَضْلِ اللّٰهِ وَبِرَحْمَتِهٖ فَبِذٰلِكَ
فَلْیَفْرَحُوْا ؕ هُوَ خَیْرٌ مِّمَّا یَجْمَعُوْنَ ۝٥٨

59. ಓ ಪೈಗಂಬರರೇ! ಇವರೊಡನೆ ಹೇಳಿರಿ- "ಅಲ್ಲಾಹನು ನಿಮಗಾಗಿ ಇಳಿಸಿದ್ದ 'ರಿಝ್ಕ್'ನ[15] ಪೈಕಿ ನೀವಾಗಿಯೇ ಕೆಲವನ್ನು 'ನಿಷಿದ್ಧ'

قُلْ اَرَءَیْتُمْ مَّاۤ اَنْزَلَ اللّٰهُ لَكُمْ مِّنْ
رِّزْقٍ فَجَعَلْتُمْ مِّنْهُ حَرَامًا وَّحَلٰلًا ؕ قُلْ

15. 'ರಿಝ್ಕ್' ಎಂಬ ಪದ ಉರ್ದು ಭಾಷೆಯಲ್ಲಿ ತಿನ್ನುವ-ಕುಡಿಯುವ ವಸ್ತುಗಳಿಗೆ ಉಪಯೋಗಿಸಲ್ಪಡುತ್ತದೆ. ಆದರೆ ಅರಬಿ ಭಾಷೆಯಲ್ಲಿ

ಮತ್ತು ಕೆಲವನ್ನು 'ಧರ್ಮಸಮ್ಮತ'ಗೊಳಿಸಿದುದರ ಬಗ್ಗೆ ನೀವು ವಿವೇಚಿಸಿದ್ದೀರಾ?'[16] ಅಲ್ಲಾಹನು ನಿಮಗೆ ಇದರ ಅನುಮತಿ ನೀಡಿದ್ದನೋ ಅಥವಾ ನೀವು ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುತ್ತಿರುವಿರೋ ಎಂದು ಇವರೊಡನೆ ಕೇಳಿರಿ.[17]

آٰللّٰهُ اَذِنَ لَكُمْ اَمْ عَلَى اللّٰهِ تَفْتَرُوْنَ ﴿٥٩﴾

60. ಅಲ್ಲಾಹನ ಮೇಲೆ ಇಂತಹ ಸುಳ್ಳಾರೋಪ ಹೊರಿಸುವವರೊಂದಿಗೆ ನಿರ್ಣಾಯಕ ದಿನದಂದು ಹೇಗೆ ವ್ಯವಹರಿಸಲಾಗುವುದೆಂದು ಅವರು ಊಹಿಸಿದ್ದಾರೆಯೇ? ಅಲ್ಲಾಹನಾದರೋ ಜನರ ಮೇಲೆ ಕೃಪಾ ಕಟಾಕ್ಷವನ್ನಿರಿಸುತ್ತಾನೆ. ಆದರೆ ಹೆಚ್ಚಿನವರು ಕೃತಜ್ಞತೆ ತೋರುವುದಿಲ್ಲ.

وَمَا ظَنُّ الَّذِيْنَ يَفْتَرُوْنَ عَلَى اللّٰهِ الْكَذِبَ يَوْمَ الْقِيٰمَةِ ؕ اِنَّ اللّٰهَ لَذُوْ فَضْلٍ عَلَى النَّاسِ وَلٰكِنَّ اَكْثَرَهُمْ لَا يَشْكُرُوْنَ ﴿٦٠﴾

61. ಓ ಪೈಗಂಬರರೇ, ನೀವು ಯಾವುದೇ ಅವಸ್ಥೆಯಲ್ಲಿದ್ದರೂ ಕುರ್‌ಆನ್‌ನಿಂದ ಏನನ್ನು ಕೇಳಿಸುತ್ತಿದ್ದರೂ ಮತ್ತು ಜನರೇ, ನೀವೂ ಏನನ್ನೂ ಮಾಡುತ್ತಲಿದ್ದರೂ ಆ ವೇಳೆ ನಾವು ನಿಮ್ಮನ್ನು ನೋಡುತ್ತಿರುತ್ತೇವೆ. ನಿಮ್ಮ ಪ್ರಭುವಿನ ದೃಷ್ಟಿಯಿಂದ ಅಡಗಿರುವ ಹಾಗೂ ಒಂದು ಸುಸ್ಪಷ್ಟ ಗ್ರಂಥದಲ್ಲಿ ಲಿಖಿತಗೊಂಡಿರದ ಅಣು ಮಾತ್ರ ವಸ್ತುವೂ ಚಿಕ್ಕದಾಗಲಿ ದೊಡ್ಡದಾಗಲಿ ಭೂಮಿಯಲ್ಲೂ ಇಲ್ಲ, ಆಕಾಶಗಳಲ್ಲೂ ಇಲ್ಲ.

وَمَا تَكُوْنُ فِيْ شَاْنٍ وَّمَا تَتْلُوْا مِنْهُ مِنْ قُرْاٰنٍ وَّلَا تَعْمَلُوْنَ مِنْ عَمَلٍ اِلَّا كُنَّا عَلَيْكُمْ شُهُوْدًا اِذْ تُفِيْضُوْنَ فِيْهِ ؕ وَمَا يَعْزُبُ عَنْ رَّبِّكَ مِنْ مِّثْقَالِ ذَرَّةٍ فِي الْاَرْضِ وَلَا فِي السَّمَآءِ وَلَآ اَصْغَرَ مِنْ ذٰلِكَ وَلَآ اَكْبَرَ اِلَّا فِيْ كِتٰبٍ مُّبِيْنٍ ﴿٦١﴾

62. ಕೇಳಿರಿ! ನಿಶ್ಚಯವಾಗಿಯೂ ಅಲ್ಲಾಹನ ಮಿತ್ರರಾಗಿರುವವರಿಗೆ, ಯಾವತ್ತು ಭಯ ಮತ್ತು ವ್ಯಥೆಯ ಸಂಭವವೇ ಇಲ್ಲ.

اَلَآ اِنَّ اَوْلِيَآءَ اللّٰهِ لَا خَوْفٌ عَلَيْهِمْ وَلَا هُمْ يَحْزَنُوْنَ ﴿٦٢﴾

63. ಅವರು ಸತ್ಯವಿಶ್ವಾಸವಿರಿಸಿಕೊಂಡವರು ಮತ್ತು ಧರ್ಮನಿಷ್ಠೆಯ ನಿಲುಮೆಯನ್ನಿರಿಸಿ ಕೊಂಡವರು.

اَلَّذِيْنَ اٰمَنُوْا وَكَانُوْا يَتَّقُوْنَ ﴿٦٣﴾ ؕ

64. ಇಹಪರ ಜೀವನಗಳೆರಡರಲ್ಲೂ ಅವರಿಗೆ ಭಾರೀ ಶುಭವಾರ್ತೆ

لَهُمُ الْبُشْرٰى فِي الْحَيٰوةِ الدُّنْيَا وَفِي

ಅದರ ಅರ್ಥ 'ಆಹಾರ'ಕ್ಕೆ ಸೀಮಿತವಾಗಿಲ್ಲ. ಕೊಡುಗೆ, ಉಡುಗೊರೆ ಮತ್ತು ಸೌಭಾಗ್ಯ ಎಂಬ ಅರ್ಥದಲ್ಲೂ ಅದರ ಉಪಯೋಗ ಸಾಮಾನ್ಯವಾಗಿದೆ. ಅಲ್ಲಾಹನು ಮನುಷ್ಯನಿಗೆ ಭೂಮಿಯಲ್ಲಿ ಏನೆಲ್ಲಾ ನೀಡಿದ್ದಾನೋ ಅದೆಲ್ಲವೂ ಅವನ 'ರಿಝ್ಕ್' ಆಗಿದೆ.

16. ಅರ್ಥಾತ್- ತಮ್ಮ ಪಾಲಿಗೆ ಕಾನೂನು ಮತ್ತು ಶರೀಅತನ್ನು ರಚಿಸಲು ನೀವು ಸ್ವಯಂ ಸ್ವತಂತ್ರರಾದಿರಿ. ವಾಸ್ತವದಲ್ಲಿ ಯಾರು 'ರಿಝ್ಕ್' ಅಥವಾ ಜೀವನಾಧಾರವನ್ನು ಒದಗಿಸಿದ್ದಾನೋ, ಅವನಿಗೇ ಅದರ ಸಿಂಧು-ಅಸಿಂಧುಗಳ ಮೇರೆ ಮತ್ತು ನಿಯಮಗಳನ್ನು ರೂಪಿಸುವ ಅಧಿಕಾರವಿದೆ.

17. ಸುಳ್ಳಾರೋಪ ಹೊರಿಸುವುದರ ಮೂರು ವಿಧಗಳಿವೆ. ಮೊದಲನೆಯದಾಗಿ ಅಲ್ಲಾಹನು ಸ್ವತಃ ಈ ಅಧಿಕಾರವನ್ನು ಮನುಷ್ಯನಿಗೆ ನೀಡಿದ್ದಾನೆ ಎಂದು ಹೇಳುವುದು. ಎರಡನೆಯದಾಗಿ ನಮ್ಮ ಪಾಲಿಗೆ ಕಾನೂನು ಮತ್ತು ಶರೀಅತನ್ನು ಗೊತ್ತುಪಡಿಸುವುದು ಅಲ್ಲಾಹನ ಕೆಲಸವಲ್ಲ ಎಂದು ಹೇಳುವುದು. ಮೂರನೆಯದಾಗಿ ಸಿಂಧು-ಅಸಿಂಧುಗಳು ಅಲ್ಲಾಹನ ವತಿಯಿಂದಾಗಿದೆ ಎಂದು ಹೇಳಿ ಆಧಾರ ಪ್ರಮಾಣದ ರೂಪದಲ್ಲಿ ಅಲ್ಲಾಹನ ಯಾವುದೇ ಗ್ರಂಥವನ್ನು ಸಮರ್ಪಿಸದಿರುವುದು.

ಇದೆ. ಅಲ್ಲಾಹನ ವಚನಗಳು ಬದಲಾಗುವಂತಿಲ್ಲ. ಇದುವೇ ಅತಿ ಹಿರಿದಾದ ಯಶಸ್ಸು.

الْآخِرَةِ ۚ لَا تَبْدِيلَ لِكَلِمَاتِ اللَّهِ ۚ
ذَٰلِكَ هُوَ الْفَوْزُ الْعَظِيمُ ﴿٦٤﴾

65. ಓ ಪೈಗಂಬರರೇ, ಇವರು ನಿಮ್ಮ ಬಗ್ಗೆ ಸೃಷ್ಟನೆ ಮಾಡುತ್ತಿರುವ ಮಾತುಗಳು ನಿಮ್ಮನ್ನು ದುಃಖಕ್ಕೀಡು ಮಾಡದಿರಲಿ, ಪ್ರತಿಷ್ಠೆಯು ಸರ್ವ ಸಂಪೂರ್ಣವಾಗಿ ಅಲ್ಲಾಹನ ಅಧಿಕಾರದಲ್ಲಿದೆ. ಅವನು ಸರ್ವಶ್ರುತನೂ ಸರ್ವಜ್ಞನೂ ಆಗಿರುತ್ತಾನೆ.

وَلَا يَحْزُنكَ قَوْلُهُمْ ۘ إِنَّ الْعِزَّةَ لِلَّهِ
جَمِيعًا ۚ هُوَ السَّمِيعُ الْعَلِيمُ ﴿٦٥﴾

66. ತಿಳಿದುಕೊಳ್ಳಿರಿ- ಆಕಾಶಗಳಲ್ಲಿರುವವರಿರಲಿ ಅಥವಾ ಭೂಮಿಯ ಮೇಲಿರುವವರಿರಲಿ ಎಲ್ಲರೂ ಅಲ್ಲಾಹನ ಅಧೀನರು. ಅಲ್ಲಾಹನ ಹೊರತು (ಸ್ವಯಂ ನಿರ್ಮಿತ) ಸಹಭಾಗಿಗಳನ್ನು ಕರೆಯುತ್ತಿರುವವರು ಕೇವಲ ಕಲ್ಪಿತ ಕಲ್ಪನೆಗಳ ಹಿಂಬಾಲಕರು ಮತ್ತು ಅವರು ಬರೇ ಊಹಾಪೋಹೆಗಳನ್ನಷ್ಟೇ ಮಾಡುತ್ತಾರೆ.

أَلَا إِنَّ لِلَّهِ مَن فِي السَّمَاوَاتِ وَمَن فِي
الْأَرْضِ ۗ وَمَا يَتَّبِعُ الَّذِينَ يَدْعُونَ
مِن دُونِ اللَّهِ شُرَكَاءَ ۚ إِن يَتَّبِعُونَ إِلَّا
الظَّنَّ وَإِنْ هُمْ إِلَّا يَخْرُصُونَ ﴿٦٦﴾

67. ನೀವು ಪ್ರಶಾಂತಿಯನ್ನು ಪಡೆಯಲಾಗುವಂತೆ ನಿಮಗಾಗಿ ರಾತ್ರಿಯನ್ನು ಮಾಡಿದವನೂ ಪ್ರಕಾಶಮಾನವಾಗಿ ಹಗಲನ್ನು ಮಾಡಿದವನೂ ಅಲ್ಲಾಹನೇ ಆಗಿರುತ್ತಾನೆ. ಇದರಲ್ಲಿ (ಪೈಗಂಬರರ ಕರೆಯನ್ನು ಕಿವಿಗೊಟ್ಟು) ಆಲಿಸುವವರಿಗೆ ದೃಷ್ಟಾಂತಗಳಿವೆ.

هُوَ الَّذِي جَعَلَ لَكُمُ اللَّيْلَ لِتَسْكُنُوا
فِيهِ وَالنَّهَارَ مُبْصِرًا ۚ إِنَّ فِي ذَٰلِكَ
لَآيَاتٍ لِّقَوْمٍ يَسْمَعُونَ ﴿٦٧﴾

68. ಅಲ್ಲಾಹನು ತನಗೋರ್ವ ಪುತ್ರನನ್ನು ಮಾಡಿಕೊಂಡಿದ್ದಾನೆಂದು ಜನರಾಡಿಬಿಟ್ಟರು, 'ಅಲ್ಲಾಹ್ ಪರಮ ಪವಿತ್ರನು', ಅವನಂತು ನಿರಪೇಕ್ಷನಾಗಿರುತ್ತಾನೆ. ಭೂಮಿ ಮತ್ತು ಆಕಾಶಗಳಲ್ಲಿರುವುದೆಲ್ಲವೂ ಅವನ ಸ್ವಂತ ಸೊತ್ತು. ಈ ಮಾತಿಗೆ ನಿಮ್ಮಲ್ಲಿ ಆಧಾರ ಪ್ರಮಾಣವಾದರೂ ಏನಿದೆ? ಅಲ್ಲಾಹನ ಬಗ್ಗೆ ನಿಮಗೆ ತಿಳಿಯದುದನ್ನು ಹೇಳುತ್ತೀರಾ?

قَالُوا اتَّخَذَ اللَّهُ وَلَدًا ۗ سُبْحَانَهُ ۖ هُوَ الْغَنِيُّ ۖ
لَهُ مَا فِي السَّمَاوَاتِ وَمَا فِي الْأَرْضِ ۚ
إِنْ عِندَكُم مِّن سُلْطَانٍ بِهَٰذَا ۚ أَتَقُولُونَ
عَلَى اللَّهِ مَا لَا تَعْلَمُونَ ﴿٦٨﴾

69. ಓ ಪೈಗಂಬರರೇ, ಅಲ್ಲಾಹನ ಮೇಲೆ ಸುಳ್ಳಾರೋಪ ಹೊರಿಸುವವರು ಎಂದೆಂದಿಗೂ ಕೃತಾರ್ಥರಾಗಲಾರರೆಂದು ಹೇಳಿ ಬಿಡಿರಿ.

قُلْ إِنَّ الَّذِينَ يَفْتَرُونَ عَلَى اللَّهِ الْكَذِبَ
لَا يُفْلِحُونَ ﴿٦٩﴾

70. ಕೇವಲ ಕೆಲವೇ ದಿನಗಳ ಇಹಲೋಕ ಜೀವನದಲ್ಲಿ ಅವರು ಆನಂದ ಪಟ್ಟುಕೊಳ್ಳಲಿ. ಆಮೇಲೆ ಅವರು ನಮ್ಮ ಕಡೆಗೇ ಮರಳಬೇಕಾಗಿದೆ. ಅನಂತರ ಅವರು ಮಾಡುತ್ತಿರುವ ಸತ್ಯನಿಷೇಧ ಕಾರ್ಯಕ್ಕಾಗಿ ನಾವು ಅವರಿಗೆ ಘೋರ ಯಾತನೆಯ ಸವಿಯನ್ನುಣಿಸುವೆವು.

مَتَاعٌ فِي الدُّنْيَا ثُمَّ إِلَيْنَا مَرْجِعُهُمْ ثُمَّ
نُذِيقُهُمُ الْعَذَابَ الشَّدِيدَ بِمَا كَانُوا يَكْفُرُونَ ﴿٧٠﴾

71. ಇವರಿಗೆ ನೂಹರ ಸಮಾಚಾರ ತಿಳಿಸಿರಿ. ಅವರು ತಮ್ಮ ಜನಾಂಗಕ್ಕೆ ಹೇಳಿದಾಗಿನ ವೃತ್ತಾಂತ "ಓ ನನ್ನ ಜನಾಂಗ ಬಾಂಧವರೇ, ನಿಮ್ಮ ನಡುವೆ ನನ್ನ ಇರುವಿಕೆಯೂ ಅಲ್ಲಾಹನ ವಚನಗಳನ್ನು ಹೇಳಿ ಹೇಳಿ ನಿಮ್ಮನ್ನು ಅಲಕ್ಷ್ಯಭಾವದಿಂದ ಎಚ್ಚರಗೊಳಿಸುವುದೂ ನಿಮಗೆ ಅಸಹನೀಯವಾಗಿರುವುದಾದರೆ ನನ್ನ ಭರವಸೆ ಅಲ್ಲಾಹನ ಮೇಲಿದೆ. ನೀವು ಸ್ವಯಂ ನಿಶ್ಚಯಿಸಿ ಕೊಂಡಿರುವ ಸಹಭಾಗಿಗಳನ್ನು ಜತೆಗೂಡಿಸಿಕೊಂಡು ಒಂದು ಒಮ್ಮತದ ನಿರ್ಧಾರವನ್ನು ಮಾಡಿಕೊಳ್ಳಿರಿ. ನಿಮ್ಮ ಮುಂದಿರುವ ಯೋಜನೆಯ ಯಾವ ಅಂಶವೂ ನಿಮ್ಮ ದೃಷ್ಟಿಯಿಂದ ಮರೆಯಾಗಿ ಹೋಗದಂತೆ ಅದರ ಬಗ್ಗೆ ಚೆನ್ನಾಗಿ ವಿವೇಚಿಸಿಕೊಳ್ಳಿರಿ. ಅನಂತರ ಅದನ್ನು ನನ್ನ ವಿರುದ್ಧ ಕಾರ್ಯಾಚರಣೆಗೆ ತನ್ನಿರಿ ಮತ್ತು ನನಗೆ ಸಮಯಾವಕಾಶ ಕೊಡಲೇ ಬೇಡಿರಿ.

وَاتْلُ عَلَيْهِمْ نَبَأَ نُوحٍ إِذْ قَالَ لِقَوْمِهِ
يٰقَوْمِ إِنْ كَانَ كَبُرَ عَلَيْكُمْ مَقَامِي وَ
تَذْكِيرِي بِآيٰتِ اللّٰهِ فَعَلَى اللّٰهِ تَوَكَّلْتُ
فَأَجْمِعُوا أَمْرَكُمْ وَشُرَكَاءَكُمْ ثُمَّ لَا يَكُنْ
أَمْرُكُمْ عَلَيْكُمْ غُمَّةً ثُمَّ اقْضُوا إِلَيَّ
وَلَا تُنْظِرُونِ ﴿٧١﴾

72. ನೀವು ನನ್ನ ಉಪದೇಶವನ್ನು ತಿರಸ್ಕರಿಸಿದರೆ, (ನನಗೆ ನಷ್ಟವೇನು?) ನಾನಂತು ನಿಮ್ಮಿಂದ ಯಾವತ್ತು ಪ್ರತಿಫಲಾಪೇಕ್ಷಕನಾಗಿರಲಿಲ್ಲ. ನನ್ನ ಪ್ರತಿಫಲವು ಅಲ್ಲಾಹನಲ್ಲಿದೆ. (ಯಾರಾದರೂ ಮಾನ್ಯ ಮಾಡಲಿ ಅಥವಾ ಮಾಡದಿರಲಿ) ನಾನು ಸ್ವಯಂ ಮುಸ್ಲಿಮನಾಗಿರ ಬೇಕೆಂದು ನನಗೆ ಆಜ್ಞಾಪಿಸಲಾಗಿರುತ್ತದೆ."

فَإِنْ تَوَلَّيْتُمْ فَمَا سَأَلْتُكُمْ مِنْ أَجْرٍ
إِنْ أَجْرِيَ إِلَّا عَلَى اللّٰهِ وَأُمِرْتُ أَنْ
أَكُونَ مِنَ الْمُسْلِمِينَ ﴿٧٢﴾

73. ಆ ಜನರು ಅವರನ್ನು ಸುಳ್ಳಾಗಿಸಿದರು. ಇದರ ಪರಿಣಾಮವಾಗಿ ನಾವು ಅವರನ್ನೂ ಅವರ ಸಂಗಡ ನಾವೆಯಲ್ಲಿದ್ದವರೆಲ್ಲರನ್ನೂ ರಕ್ಷಿಸಿದೆವು. ಅವರನ್ನೇ ಭೂಮಿಯಲ್ಲಿ ಉತ್ತರಾಧಿಕಾರಿಗಳಾಗಿ ಮಾಡಿದೆವು ಮತ್ತು ನಮ್ಮ ದೃಷ್ಟಾಂತಗಳನ್ನು ಸುಳ್ಳಾಗಿಸಿದ್ದ ಎಲ್ಲರನ್ನೂ ಮುಳುಗಿಸಿ ಬಿಟ್ಟೆವು. ಆದುದರಿಂದ ಎಚ್ಚರಿಕೆ ನೀಡ ಲ್ಪಟ್ಟಿದ್ದವರ (ಅಷ್ಟಾಗಿಯೂ ಸ್ವೀಕರಿಸದಿದ್ದವರ) ಪರಿಣಾಮ ವೇನಾಯಿತೆಂದು ನೋಡಿಕೊಳ್ಳಿರಿ.

فَكَذَّبُوهُ فَنَجَّيْنٰهُ وَمَنْ مَعَهُ فِي الْفُلْكِ
وَجَعَلْنٰهُمْ خَلٰئِفَ وَأَغْرَقْنَا الَّذِينَ كَذَّبُوا
بِآيٰتِنَا فَانْظُرْ كَيْفَ كَانَ عٰقِبَةُ الْمُنْذَرِينَ ﴿٧٣﴾

74. 'ನೂಹ'ರ ತರುವಾಯ ನಾವು ಬೇರೆ ಬೇರೆ ರಸೂಲರನ್ನು ಅವರ ಜನಾಂಗಗಳ ಕಡೆಗೆ ರವಾನಿಸಿದೆವು. ಅವರೆಲ್ಲ ಅವರ ಬಳಿಗೆ ಸುಸ್ಪಷ್ಟ ದೃಷ್ಟಾಂತಗಳ ಸಹಿತ ಬಂದರು. ಆದರೆ ಅವರು ಈ ಮುಂಚೆ ಸುಳ್ಳಾಗಿಸಿದ್ದುದನ್ನು ಮತ್ತೆ ಸ್ವೀಕರಿಸಲಿಲ್ಲ. ಹೀಗೆ ಹದಮೀರಿ ಸಾಗುವವರ ಹೃದಯಗಳಿಗೆ ನಾವು ಮುದ್ರೆಯೊತ್ತಿ ಬಿಡುತ್ತೇವೆ.

ثُمَّ بَعَثْنَا مِنْ بَعْدِهِ رُسُلًا إِلٰى قَوْمِهِمْ
فَجَاءُوهُمْ بِالْبَيِّنٰتِ فَمَا كَانُوا لِيُؤْمِنُوا
بِمَا كَذَّبُوا بِهِ مِنْ قَبْلُ كَذٰلِكَ
نَطْبَعُ عَلٰى قُلُوبِ الْمُعْتَدِينَ ﴿٧٤﴾

75. ಅವರನಂತರ ನಾವು ಮೂಸಾ ಮತ್ತು ಹಾರೂನರನ್ನು ನಮ್ಮ ನಿದರ್ಶನಗಳ ಸಹಿತ ಫಿರ್‌ಔನ್ ಮತ್ತು ಅವನ ಸರದಾರರ ಕಡೆಗೆ ಕಳುಹಿಸಿದೆವು. ಆದರೆ ಅವರು ತಮ್ಮ ಹಿರಿಮೆಯ ದರ್ಪವನ್ನು ತೋರಿದರು ಮತ್ತು ಅವರು ಅಪರಾಧಿಗಳಾಗಿದ್ದರು.

ثُمَّ بَعَثْنَا مِنْ بَعْدِهِمْ مُّوْسٰى وَهٰرُوْنَ
اِلٰى فِرْعَوْنَ وَمَلَا۟ئِهٖ بِاٰيٰتِنَا فَاسْتَكْبَرُوْا
وَكَانُوْا قَوْمًا مُّجْرِمِيْنَ ﴿٧٥﴾

76. ಆ ಪ್ರಕಾರ ಅವರು ನಮ್ಮ ಕಡೆಯಿಂದ ಸತ್ಯವು ಅವರ ಮುಂದೆ ಬಂದಾಗ ಇದು ಸುವ್ಯಕ್ತ ಮಾಟವೆಂದು ಬಿಟ್ಟರು.

فَلَمَّا جَآءَهُمُ الْحَقُّ مِنْ عِنْدِنَا قَالُوْٓا
اِنَّ هٰذَا لَسِحْرٌ مُّبِيْنٌ ﴿٧٦﴾

77. 'ಮೂಸಾ'ರು ಹೀಗೆಂದರು, "ನಿಮ್ಮ ಮುಂದೆ ಸತ್ಯವು ಪ್ರತ್ಯಕ್ಷಗೊಂಡಾಗ ಅದನ್ನು ಹೀಗೆನ್ನುತ್ತೀರಾ? ಇದು ಮಾಟವೇ? ವಸ್ತುತಃ ಮಾಟಗಾರರು ಯಶಸ್ವಿಗಳಾಗುವುದಿಲ್ಲ.[18]

قَالَ مُوْسٰٓى اَتَقُوْلُوْنَ لِلْحَقِّ لَمَّا جَآءَكُمْ ؕ
اَسِحْرٌ هٰذَا ؕ وَلَا يُفْلِحُ السّٰحِرُوْنَ ﴿٧٧﴾

78. ಅವರು ಹೀಗೆ ಉತ್ತರಿಸಿದರು, "ನಾವು ನಮ್ಮ ಪೂರ್ವಿಕರನ್ನು ಕಂಡಿದ್ದ ಪದ್ಧತಿಯಿಂದ ನಮ್ಮನ್ನು ತಿರುಗಿಸಲಿಕ್ಕಾಗಿಯೂ ಭೂಮಿಯಲ್ಲಿ ನಿಮ್ಮಿಬ್ಬರ ಹಿರಿಮೆ ಸಂಸ್ಥಾಪಿಸಲಿಕ್ಕಾಗಿಯೂ ನೀನು ಬಂದಿರುವೆಯಾ? ನಾವು ನಿಮ್ಮ ಮಾತನ್ನು ಸ್ವೀಕರಿಸುವವರಲ್ಲ."

قَالُوْٓا اَجِئْتَنَا لِتَلْفِتَنَا عَمَّا وَجَدْنَا عَلَيْهِ
اٰبَآءَنَا وَتَكُوْنَ لَكُمَا الْكِبْرِيَآءُ فِى الْاَرْضِ ؕ
وَمَا نَحْنُ لَكُمَا بِمُؤْمِنِيْنَ ﴿٧٨﴾

79. ಫಿರ್‌ಔನನು (ತನ್ನವರೊಡನೆ) ಹೇಳಿದನು, "ಪ್ರತಿಯೊಬ್ಬ ತಜ್ಞ ಮಾಟಗಾರನನ್ನು ನನ್ನ ಮುಂದೆ ಹಾಜರುಪಡಿಸಿರಿ."

وَقَالَ فِرْعَوْنُ ائْتُوْنِىْ بِكُلِّ سٰحِرٍ عَلِيْمٍ ﴿٧٩﴾

80. ಮಾಟಗಾರರು ಬಂದಾಗ (ಅವರೊಡನೆ) ಮೂಸಾ, "ನೀವು ಎಸೆಯಬೇಕಾದುದನ್ನು ಎಸೆಯಿರಿ" ಎಂದರು.

فَلَمَّا جَآءَ السَّحَرَةُ قَالَ لَهُمْ مُّوْسٰٓى اَلْقُوْا
مَآ اَنْتُمْ مُّلْقُوْنَ ﴿٨٠﴾

81. ಅವರು ಮಂತ್ರ ದಂಡಗಳನ್ನು ಎಸೆದಾಗ ಮೂಸಾರು (ಹೀಗೆ) ಹೇಳಿದರು, "ನೀವೀಗ ಎಸೆದುದು ಜಾದುವಾಗಿರುತ್ತದೆ. ಅಲ್ಲಾಹನು ಈಗಲೇ ಇದನ್ನು ನಿರರ್ಥಕಗೊಳಿಸಿ ಬಿಡುತ್ತಾನೆ. ಅಲ್ಲಾಹನು ಕಿಡಿಗೇಡಿಗಳ ಕಾರ್ಯವನ್ನು ಸರಿಯಾಗಲು ಬಿಡುವುದಿಲ್ಲ.

فَلَمَّآ اَلْقَوْا قَالَ مُوْسٰى مَا جِئْتُمْ بِهِ السِّحْرُ ؕ
اِنَّ اللّٰهَ سَيُبْطِلُهٗ ؕ اِنَّ اللّٰهَ لَا يُصْلِحُ
عَمَلَ الْمُفْسِدِيْنَ ﴿٨١﴾

82. ಮತ್ತು ಅಲ್ಲಾಹ್ ತನ್ನ ಅಪ್ಪಣೆಯಿಂದ ಸತ್ಯವನ್ನು ಸತ್ಯವನ್ನಾಗಿಯೇ ಮಾಡಿ ತೋರಿಸುತ್ತಾನೆ. ಇದರಿಂದ ಅಪರಾಧಿಗಳಿಗೆ ಎಷ್ಟೇ ಅಸಂತುಷ್ಟಿಯುಂಟಾದರೂ ಸರಿಯೇ."

وَيُحِقُّ اللّٰهُ الْحَقَّ بِكَلِمٰتِهٖ وَلَوْ
كَرِهَ الْمُجْرِمُوْنَ ﴿٨٢﴾

18. ಅರ್ಥಾತ್- ಮೇಲ್ನೋಟಕ್ಕೆ ಮಾಟ, ಮಂತ್ರ ಮತ್ತು ಪವಾಡದಲ್ಲಿ ಕಂಡುಬರುವ ಸಮಾನತೆಯನ್ನು ಕಂಡು ನೀವು ನಿಸ್ಸಂಕೋಚವಾಗಿ ಅದನ್ನು ಮಾಟವೆಂದು ಹೇಳಿ ಬಿಟ್ಟಿರಿ. ಆದರೆ ಮಾಟಗಾರರು ಎಂತಹ ಚಾರಿತ್ರ್ಯ ಉಳ್ಳವರು? ಅವರು ಯಾವ ಉದ್ದೇಶಕ್ಕಾಗಿ ಮಾಟಮಂತ್ರಗಳನ್ನು ಮಾಡುತ್ತಾರೆಂದು ನೀವು ನೋಡಲಿಲ್ಲ. ಅಕ್ರಮಿಯಾದ ಆಡಳಿತಗಾರನ ಮುಂದೆ ನಿರ್ಭಯವಾಗಿ ಬಂದು ಅವನೊಡನೆ ಅವನ ಪಥಭ್ರಷ್ಟತೆಯ ಬಗ್ಗೆ ಆಕ್ಷೇಪ ಮಾಡುವ ಹಾಗೂ ದೇವಭಕ್ತಿ ಮತ್ತು ಪರಿಶುದ್ಧತೆಯ ಕರೆ ನೀಡುವ ಕೆಲಸವನ್ನು ಮಾಟಗಾರರು ಮಾಡುತ್ತಾರೆಯೇ?

83. ಮೂಸಾರವರ ಮೇಲೆ ಆ ಜನಾಂಗದ ಕೆಲವು ಮಂದಿ ಯುವಕರ[19]
ವಿನಾ ಇನ್ನಾರೂ ವಿಶ್ವಾಸವಿರಿಸಲಿಲ್ಲ. (ಇದು) ಫಿರ್‌ಔನನ ಭಯ
ದಿಂದ ಹಾಗೂ ತಮ್ಮ ಜನಾಂಗದ ಮುಖಂಡರ ಭಯದಿಂದ.
ಫಿರ್‌ಔನ್ ಅವರನ್ನು ಯಾತನೆಗೊಳಪಡಿಸುವನೆಂದು (ಅವರಿಗೆ
ಭಯವಿತ್ತು.) ವಾಸ್ತವದಲ್ಲಿ ಫಿರ್‌ಔನನು ಭೂಮಿಯ ಮೇಲೆ
ಪ್ರಾಬಲ್ಯ ಹೊಂದಿದವನೂ ಹದಮೀರಿದವನೂ ಆಗಿದ್ದನು.[20]

فَمَآ اٰمَنَ لِمُوْسٰۤى اِلَّا ذُرِّيَّةٌ مِّنْ قَوْمِهٖ
عَلٰى خَوْفٍ مِّنْ فِرْعَوْنَ وَ مَلَا۟ئِهِمْ اَنْ
يَّفْتِنَهُمْ ؕ وَ اِنَّ فِرْعَوْنَ لَعَالٍ فِى الْاَرْضِ ۚ
وَ اِنَّهٗ لَمِنَ الْمُسْرِفِيْنَ ﴿٨٣﴾

84. ಮೂಸಾ ತಮ್ಮ ಜನಾಂಗದೊಡನೆ, "ಜನರೇ, ನೀವು ನಿಜಕ್ಕೂ
ಅಲ್ಲಾಹನ ಮೇಲೆ ವಿಶ್ವಾಸವಿಡುತ್ತೀರಾದರೆ- ಅವನ ಮೇಲೆ
ಭರವಸೆಯನ್ನಿರಿಸಿರಿ- ನೀವು ನಿಜಕ್ಕೂ ಮುಸ್ಲಿಮರಾಗಿದ್ದರೆ"
(ಹಾಗೆ ಮಾಡಿರಿ) ಎಂದು ಹೇಳಿದರು.

وَ قَالَ مُوْسٰى يٰقَوْمِ اِنْ كُنْتُمْ اٰمَنْتُمْ
بِاللّٰهِ فَعَلَيْهِ تَوَكَّلُوْۤا اِنْ كُنْتُمْ مُّسْلِمِيْنَ ﴿٨٤﴾

85. ಅವರು ಉತ್ತರವಿತ್ತರು:[21] "ನಾವು ಅಲ್ಲಾಹನ ಮೇಲೆಯೇ
ಭರವಸೆಯನ್ನಿರಿಸಿದೆವು. ಓ ನಮ್ಮ ಪ್ರಭೂ, ನಮ್ಮನ್ನು ಅಕ್ರಮಿ
ಗಳಿಗೆ ಪರೀಕ್ಷಾ ಸಾಧನವನ್ನಾಗಿ ಮಾಡದಿರು-

فَقَالُوْا عَلَى اللّٰهِ تَوَكَّلْنَا ۚ رَبَّنَا لَا تَجْعَلْنَا
فِتْنَةً لِّلْقَوْمِ الظّٰلِمِيْنَ ﴿٨٥﴾

86. ಮತ್ತು ನಿನ್ನ ಕೃಪೆಯಿಂದ ನಮ್ಮನ್ನು ಸತ್ಯನಿಷೇಧಿಗಳಿಂದ
ರಕ್ಷಿಸು."

وَ نَجِّنَا بِرَحْمَتِكَ مِنَ الْقَوْمِ الْكٰفِرِيْنَ ﴿٨٦﴾

87. ನಾವು ಮೂಸಾ ಮತ್ತು ಅವರ ಸಹೋದರನಿಗೆ (ಈ ರೀತಿ)
ಸೂಚನೆ ಕೊಟ್ಟೆವು, "ಈಜಿಪ್ಟಿನಲ್ಲಿ ತಮ್ಮ ಜನಾಂಗದವರಿಗಾಗಿ
ಕೆಲವು ನಿವೇಶನಗಳನ್ನು ಒದಗಿಸಿರಿ. ತಮ್ಮ ಆ ನಿವೇಶನಗಳನ್ನು

وَ اَوْحَيْنَاۤ اِلٰى مُوْسٰى وَ اَخِيْهِ اَنْ تَبَوَّاٰ
لِقَوْمِكُمَا بِمِصْرَ بُيُوْتًا وَّ اجْعَلُوْا بُيُوْتَكُمْ

19. ಮೂಲದಲ್ಲಿ 'ದುರ್‍ರಿಯ್ಯಃ' ಎಂಬ ಪದ ಪ್ರಯೋಗವಾಗಿದೆ. ಅದರ ಅರ್ಥ ಸಂತಾನ. ನಾವು ಅದನ್ನು 'ಯುವಕರು' ಎಂದು ಭಾಷಾಂತರಿಸಿದ್ದೇವೆ. ಈ ವಿಶಿಷ್ಟ ಪದವನ್ನು ಪ್ರಯೋಗಿಸುವ ಮೂಲಕ ಪವಿತ್ರ ಕುರ್‌ಆನ್ ಹೇಳಬಯಸುವುದೇನೆಂದರೆ, ಈ ಅಪಾಯಕಾರಿ ಘಟ್ಟದಲ್ಲಿ ಸತ್ಯಕ್ಕೆ ನೆರವಾಗುವ ಮತ್ತು ಸತ್ಯದ ವಾಹಕರನ್ನು ತನ್ನ ಮಾರ್ಗದರ್ಶಿ ಎಂದು ಒಪ್ಪಿಕೊಳ್ಳುವ ಧೈರ್ಯವನ್ನು ಕೆಲವು ಯುವಕ-ಯುವತಿಯರು ಮಾತ್ರ ತೋರಿದರು. ಅವರ ತಂದೆ-ತಾಯಂದಿರು ಮತ್ತು ಜನಾಂಗದ ಹಿರಿಯ ವ್ಯಕ್ತಿಗಳಿಗೆ ಅಂತಹ ಸೌಭಾಗ್ಯ ದೊರೆಯಲಿಲ್ಲ. ನೆಪಗಳನ್ನು ಹುಡುಕುವ ಪ್ರವೃತ್ತಿ, ಲೌಕಿಕ ಹಿತಾಸಕ್ತಿಗಳ ದಾಸ್ಯ ಮತ್ತು ಸ್ವಾರ್ಥ ಹಿತಾಸಕ್ತಿ ಅವರನ್ನು ಆವರಿಸಿಕೊಂಡಿತ್ತು. ಅದು ಅವರನ್ನು ಸತ್ಯಕ್ಕೆ ನೆರವಾಗಲುದ್ಯುಕ್ತವಾಗುವುದರಿಂದ ತಡೆಯಿತು. ಅದು ಅವರಿಗೆ ಅತ್ಯಂತ ಅಪಾಯಕರ ಹಾದಿಯೆಂದು ತೋರಿತು. ಸಾಲದೆಂಬಂತೆ ಮೂಸಾರ(ಅ) ಬಳಿ ಹೋಗದಂತೆ ಯುವಕರನ್ನೂ ಅವರು ತಡೆಯುತ್ತಿದ್ದರು. ಅನ್ಯಥಾ ನೀವೂ ಫಿರ್‌ಔನ್‌ನ ಕ್ರೋಧಕ್ಕೆ ಒಳಗಾಗುವಿರಿ, ನಮಗೂ ಆಪತ್ತು ಬಂದೊದಗುವುದು ಎಂದು ಅವರು ಹೇಳುತ್ತಿದ್ದರು.

20. ಅರ್ಥಾತ್- ತಮ್ಮ ಉದ್ದೇಶ ಸಾಧನೆಗಾಗಿ ಎಂತಹ ಕೆಟ್ಟ ವಿಧಾನವನ್ನು ಅನುಸರಿಸಲೂ ಹೇಸದವರು. ಯಾವುದೇ ರೀತಿಯ ಅಕ್ರಮ, ಅನೈತಿಕತೆ ಮತ್ತು ದಾನವೀಯ, ಪಾಶವೀಯ ಕೃತ್ಯಗಳನ್ನೆಸಗಲು ಹಿಂಜರಿಯದವರು. ತಮ್ಮ ಸ್ವಾರ್ಥ ಸಾಧನೆಗಾಗಿ ಯಾವ ಅತಿರೇಕಕ್ಕೂ ಸಿದ್ಧರಾಗುವವರು. ಅವರು ಯಾವ ಮಿತಿಯನ್ನೂ ಪಾಲಿಸುವುದಿಲ್ಲ.

21. ಇದು ಮೂಸಾರಿಗೆ(ಅ) ನೆರವು ನೀಡಲುದ್ಯುಕ್ತರಾಗಿದ್ದ ಯುವಕರು ನೀಡಿದ ಉತ್ತರವಾಗಿದೆ. ಇಲ್ಲಿ 'ಕಾಲೂ' (ಹೇಳಿದರು) ಎಂಬ ಪದವನ್ನು ಜನಾಂಗದ ಬದಲು ಯುವಕರಿಗಾಗಿ ಉಪಯೋಗಿಸಲಾಗಿದೆ ಎಂದು ಹಿನ್ನೆಲೆಯನ್ನು ಗಮನಿಸಿದರೆ ವ್ಯಕ್ತವಾಗುತ್ತದೆ.

ಅಭಿಮುಖಕೇಂದ್ರ(ಕಿಬ್ಲಾ)ವನ್ನಾಗಿ ಮಾಡಿಕೊಳ್ಳಿರಿ, ನಮಾಝನ್ನು ಸಂಸ್ಥಾಪಿಸಿರಿ[22] ಮತ್ತು ಸತ್ಯವಿಶ್ವಾಸಿಗಳಿಗೆ ಶುಭವಾರ್ತೆ ನೀಡಿರಿ."

قِبْلَةً وَّ اَقِيْمُوا الصَّلٰوةَ ۗ وَ بَشِّرِ الْمُؤْمِنِيْنَ ﴿٨٧﴾

88. ಮೂಸಾರವರು ಪ್ರಾರ್ಥಿಸಿದರು, "ಓ ನಮ್ಮ ಪ್ರಭೂ, ನೀನು ಫಿರ್‌ಔನ್ ಮತ್ತು ಅವನ ಸರದಾರರಿಗೆ ಲೌಕಿಕ ಜೀವನದಲ್ಲಿ ವೈಭವಾಡಂಬರ ಹಾಗೂ ಸಂಪತ್ತನ್ನು ಪ್ರದಾನ ಮಾಡಿರುವಿ. ಓ ಪ್ರಭೂ, ಇದು ಅವರು ಜನರನ್ನು ನಿನ್ನ ಮಾರ್ಗದಿಂದ ತಪ್ಪಿಸಲಿಕ್ಕಾಗಿಯೇ? ಓ ಪ್ರಭೂ, ಅವರ ಸಂಪತ್ತನ್ನು ನಾಶಪಡಿಸು. ಅವರು ವೇದನಾಯುಕ್ತ ಯಾತನೆಯನ್ನು ಕಣ್ಣಾರೆ ಕಾಣುವವರೆಗೂ ವಿಶ್ವಾಸವಿರಿಸದಂತೆ ಅವರ ಹೃದಯಗಳ ಮೇಲೆ ಮುದ್ರೆಯೊತ್ತಿಬಿಡು."[23]

وَ قَالَ مُوْسٰى رَبَّنَآ اِنَّكَ اٰتَيْتَ فِرْعَوْنَ وَ مَلَاَهٗ زِيْنَةً وَّ اَمْوَالًا فِى الْحَيٰوةِ الدُّنْيَا ۙ رَبَّنَا لِيُضِلُّوْا عَنْ سَبِيْلِكَ ۚ رَبَّنَا اطْمِسْ عَلٰٓى اَمْوَالِهِمْ وَ اشْدُدْ عَلٰى قُلُوْبِهِمْ فَلَا يُؤْمِنُوْا حَتّٰى يَرَوُا الْعَذَابَ الْاَلِيْمَ ﴿٨٨﴾

89. ಅಲ್ಲಾಹನು ಉತ್ತರವಿತ್ತನು: - ನಿಮ್ಮಿಬ್ಬರ ಪ್ರಾರ್ಥನೆಯು ಸ್ವೀಕರಿಸಲ್ಪಟ್ಟಿತು. ದೃಢಚಿತ್ತರಾಗಿರಿ, ಅಜ್ಞಾನಿಗಳ ಮಾರ್ಗವನ್ನೆಂದಿಗೂ ಅನುಸರಿಸಬೇಡಿರಿ.

قَالَ قَدْ اُجِيْبَتْ دَّعْوَتُكُمَا فَاسْتَقِيْمَا وَ لَا تَتَّبِعٰٓنِّ سَبِيْلَ الَّذِيْنَ لَا يَعْلَمُوْنَ ﴿٨٩﴾

90. ನಾವು ಬನೀಇಸ್ರಾಈಲರನ್ನು ಸಮುದ್ರ ದಾಟಿಸಿಕೊಂಡೊಯ್ದೆವು. ಅನಂತರ ಫಿರ್‌ಔನನೂ ಅವನ ಸೇನೆಯೂ ದಂಗೆ, ವಿದ್ವೇಷಗಳನ್ನು ಉದ್ದೇಶವಾಗಿರಿಸಿಕೊಂಡು ಅವರನ್ನು ಬೆನ್ನಟ್ಟಿದರು. ಕೊನೆಗೆ ಫಿರ್‌ಔನನು ಮುಳುಗುತ್ತಿರುವಾಗ ಹೀಗೆಂದನು, "ಬನೀ ಇಸ್‌ರಾಈಲರು ವಿಶ್ವಾಸವಿಟ್ಟಿರುವ ದೇವನ ಹೊರತು ಅನ್ಯ ದೇವನಿಲ್ಲವೆಂದು ನಾನು ಒಪ್ಪಿಕೊಂಡೆನು ಮತ್ತು ನಾನೂ ಶರಣಾಗತರಾಗುವವರಲ್ಲಾಗಿರುತ್ತೇನೆ."

وَ جٰوَزْنَا بِبَنِىْٓ اِسْرَآءِيْلَ الْبَحْرَ فَاَتْبَعَهُمْ فِرْعَوْنُ وَ جُنُوْدُهٗ بَغْيًا وَّ عَدْوًا ۭ حَتّٰٓى اِذَآ اَدْرَكَهُ الْغَرَقُ ۙ قَالَ اٰمَنْتُ اَنَّهٗ لَآ اِلٰهَ اِلَّا الَّذِىْٓ اٰمَنَتْ بِهٖ بَنُوْٓا اِسْرَآءِيْلَ وَ اَنَا مِنَ الْمُسْلِمِيْنَ ﴿٩٠﴾

22. ಈಜಿಪ್ಟಿನಲ್ಲಿ ಸರ್ಕಾರದ ದೌರ್ಜನ್ಯ ಮತ್ತು ಸ್ವತಃ ಬನೀಇಸ್ರಾಈಲರ ದುರ್ಬಲ ವಿಶ್ವಾಸದಿಂದಾಗಿ ಇಸ್ರಾಈಲಿ ಮತ್ತು ಈಜಿಪ್ಟ್ ಮೂಲದ ಮುಸ್ಲಿಮರಲ್ಲಿ ಸಾಮೂಹಿಕ ನಮಾಝಿನ ವ್ಯವಸ್ಥೆಯೇ ಕೊನೆಗೊಂಡಿತ್ತು. ಅವರ ಅಧಃಪತನ, ಅನೈಕ್ಯ ಮತ್ತು ಧಾರ್ಮಿಕ ಸ್ಫೂರ್ತಿಯ ವಿನಾಶಕ್ಕೆ ಇದೂ ಒಂದು ಪ್ರಮುಖ ಕಾರಣವಾಗಿತ್ತು. ಆದ್ದರಿಂದ ಮೂಸಾರಿಗೆ(ಅ) ಈ ವ್ಯವಸ್ಥೆಯನ್ನು ಪುನಃ ಸ್ಥಾಪಿಸುವಂತೆ ಆಜ್ಞಾಪಿಸಲಾಯಿತು. ಈ ಉದ್ದೇಶಕ್ಕಾಗಿ ಈಜಿಪ್ಟ್‌ನಲ್ಲಿ ಕೆಲವು ಮನೆಗಳನ್ನು ನಿರ್ಮಿಸಿರಿ ಅಥವಾ ಗೊತ್ತುಪಡಿಸಿಕೊಳ್ಳಿರಿ ಮತ್ತು ಅಲ್ಲಿ ಸಾಮೂಹಿಕ ನಮಾಝನ್ನು ರೂಢಿಗೊಳಿಸಿರಿ ಎನ್ನಲಾಯಿತು. ಆ ಮನೆಗಳನ್ನು ಕಿಬ್ಲಾವನ್ನಾಗಿ ಮಾಡಿಕೊಳ್ಳುವುದೆಂದರೆ ಅದನ್ನು ಸಮಸ್ತ ಸಮುದಾಯದ ಪಾಲಿಗೆ ಗಮನ ಕೇಂದ್ರವಾಗಿ ಮಾಡಿರಿ. ಅನಂತರವಷ್ಟೇ ಅಲ್ಲಿ ನಮಾಝ್ ಸಂಸ್ಥಾಪಿಸಿರಿ. ಅರ್ಥಾತ್ ಭಿನ್ನಭಿನ್ನರಾಗಿ ತಂತಮ್ಮ ಸ್ಥಳಗಳಲ್ಲಿ ನಮಾಝ್ ನಿರ್ವಹಿಸುವ ಬದಲು ನಿರ್ದಿಷ್ಟ ಸ್ಥಳಗಳಲ್ಲಿ ಒಟ್ಟು ಸೇರಿ ನಮಾಝ್ ನಿರ್ವಹಿಸಿರಿ ಎಂದಾಗಿದೆ.

23. ತಮ್ಮ ಈಜಿಪ್ಟ್ ವಾಸ್ತವ್ಯದ ಅತ್ಯಂತ ಕೊನೆಯ ಘಟ್ಟದಲ್ಲಿ ಮೂಸಾರು(ಅ) ಈ ರೀತಿ ಪ್ರಾರ್ಥಿಸಿದ್ದರು. ಅನೇಕ ಬಾರಿ ದೃಷ್ಟಾಂತಗಳನ್ನು ನೋಡಿದ ಮತ್ತು ಧರ್ಮವನ್ನು ಸಾರಸಂಪೂರ್ಣವಾಗಿ ಮುಟ್ಟಿಸಲಾದ ನಂತರವೂ ಫಿರ್‌ಔನ್ ಮತ್ತು ಅವನ ಆಸ್ಥಾನಿಗರು ಸತ್ಯವನ್ನು ದ್ವೇಷಿಸುವುದರಲ್ಲಿ ಹಠಸಾಧನೆ ಮಾಡುವವರಂತೆ ಭದ್ರವಾಗಿ ನಿಂತಿದ್ದರು. ಇಂತಹ ಸಂದರ್ಭದಲ್ಲಿ ಪ್ರವಾದಿಯು ಅವರ ವಿರುದ್ಧ ದೇವನೊಡನೆ ಮಾಡುವ ಪ್ರಾರ್ಥನೆ, ದೇವನು ಸತ್ಯನಿಷೇಧದಲ್ಲಿ ಹಟಸಾಧನೆ ಮಾಡಬಯಸುವವರ ಕುರಿತು ಮಾಡಿರುವ ತೀರ್ಮಾನಕ್ಕೆ ಅನುಗುಣವಾಗಿರುತ್ತದೆ. ಅರ್ಥಾತ್ ತದನಂತರ ಅವರಿಗೆ ಎಂದೂ ಸತ್ಯವಿಶ್ವಾಸದ ಸೌಭಾಗ್ಯವನ್ನು ಕರುಣಿಸಲಾಗುವುದಿಲ್ಲ.

91. "ಈಗ ವಿಶ್ವಾಸವಿಡುತ್ತೀಯಾ? ವಸ್ತುತಃ ಇದಕ್ಕೆ ಮುಂಚಿನವರೆಗೂ ನೀನು ಆಜ್ಞೋಲ್ಲಂಘನೆ ಮಾಡುತ್ತಲಿದ್ದೆ ಮತ್ತು ಕಿಡಿಗೇಡಿ ಗಳಲ್ಲಾಗಿದ್ದೆ.

آٰلْـٰٔنَ وَقَدْ عَصَيْتَ قَبْلُ وَكُنْتَ مِنَ الْمُفْسِدِيْنَ ﴿٩١﴾

92. ನಿಶ್ಚಯವಾಗಿಯೂ ನಮ್ಮ ನಿದರ್ಶನಗಳ ಬಗ್ಗೆ ಅಲಕ್ಷ್ಯರಾಗಿರುವವರು ಬಹುಸಂಖ್ಯೆಯಲ್ಲಿದ್ದರೂ ನೀನು ಮುಂದಿನ ತಲೆಮಾರುಗಳಿಗೆ ಎಚ್ಚರಿಕೆಯ ದ್ಯೋತಕವಾಗಿರುವಂತೆ ನಾವಿನ್ನು ನಿನ್ನ ಶವವನ್ನು ಮಾತ್ರ ಸುರಕ್ಷಿತವಾಗಿರಿಸುವೆವು" (ಎಂದು ಉತ್ತರಿಸಲಾಯಿತು.)

فَالْيَوْمَ نُنَجِّيْكَ بِبَدَنِكَ لِتَكُوْنَ لِمَنْ خَلْفَكَ اٰيَةً ؕ وَاِنَّ كَثِيْرًا مِّنَ النَّاسِ عَنْ اٰيٰتِنَا لَغٰفِلُوْنَ ﴿٩٢﴾

93. ನಾವು ಬನೀಇಸ್ರಾಈಲರಿಗೆ ಅತ್ಯುತ್ತಮ ವಾಸಸ್ಥಾನ ನೀಡಿದೆವು ಮತ್ತು ಅವರಿಗೆ ಅತ್ಯುತ್ಕೃಷ್ಟ ಜೀವನಾಧಾರಗಳನ್ನು ದಯಪಾಲಿಸಿದೆವು. ಆದರೆ, ಅವರು ದಿವ್ಯಜ್ಞಾನ ಹೊಂದಿದ ಬಳಿಕವೂ ಭಿನ್ನಾಭಿಪ್ರಾಯ ತಾಳಿದರು. ನಿಶ್ಚಯವಾಗಿಯೂ ನಿನ್ನ ಪ್ರಭು ಪುನರುತ್ಥಾನ ದಿನ ಅವರ ನಡುವೆ ಅವರು ಭಿನ್ನಾಭಿಪ್ರಾಯ ತಾಳುತ್ತಿದ್ದ ವಿಷಯದಲ್ಲಿ ತೀರ್ಪು ನೀಡುವನು.

وَلَقَدْ بَوَّاْنَا بَنِيْٓ اِسْرَآءِيْلَ مُبَوَّاَ صِدْقٍ وَّرَزَقْنٰهُمْ مِّنَ الطَّيِّبٰتِ ۚ فَمَا اخْتَلَفُوْا حَتّٰى جَآءَهُمُ الْعِلْمُ ؕ اِنَّ رَبَّكَ يَقْضِيْ بَيْنَهُمْ يَوْمَ الْقِيٰمَةِ فِيْمَا كَانُوْا فِيْهِ يَخْتَلِفُوْنَ ﴿٩٣﴾

94. ನಾವು ನಿಮಗೆ ಅವತೀರ್ಣಗೊಳಿಸಿದ ಸನ್ಮಾರ್ಗದರ್ಶನದ ಬಗೆಗೆ ನಿಮಗೆ ಕಿಂಚಿತ್ತಾದರೂ ಸಂಶಯವಿದ್ದರೆ, ನಿಮಗಿಂತ ಮುಂಚೆಯೇ ಗ್ರಂಥವನ್ನೋದುತ್ತಿದ್ದವರನ್ನು ವಿಚಾರಿಸಿರಿ. ವಾಸ್ತವದಲ್ಲಿ ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಸತ್ಯವೇ ಬಂದಿರುತ್ತದೆ. ಆದುದರಿಂದ ಸಂಶಯಗ್ರಸ್ತರಲ್ಲಾಗಬೇಡಿರಿ.

فَاِنْ كُنْتَ فِيْ شَكٍّ مِّمَّآ اَنْزَلْنَآ اِلَيْكَ فَسْـَٔلِ الَّذِيْنَ يَقْرَءُوْنَ الْكِتٰبَ مِنْ قَبْلِكَ ۚ لَقَدْ جَآءَكَ الْحَقُّ مِنْ رَّبِّكَ فَلَا تَكُوْنَنَّ مِنَ الْمُمْتَرِيْنَ ﴿٩٤﴾

95. ಮತ್ತು ಅಲ್ಲಾಹನ ವಚನಗಳನ್ನು ಸುಳ್ಳಾಗಿಸುವವರಲ್ಲಾಗಬೇಡಿರಿ. ಅನ್ಯಥಾ ನೀವು ನಷ್ಟ ಹೊಂದುವವರಲ್ಲಾಗುವಿರಿ.[24]

وَلَا تَكُوْنَنَّ مِنَ الَّذِيْنَ كَذَّبُوْا بِاٰيٰتِ اللّٰهِ فَتَكُوْنَ مِنَ الْخٰسِرِيْنَ ﴿٩٥﴾

96. ವಾಸ್ತವದಲ್ಲಿ ಯಾರ ಬಗ್ಗೆ ನಿನ್ನ ಪ್ರಭುವಿನ ವಚನವು ಸತ್ಯವಾಗಿಬಿಟ್ಟಿತೋ[25] ಅವರು ಎಂದಿಗೂ ವಿಶ್ವಾಸವಿರಿಸಲಾರರು.

اِنَّ الَّذِيْنَ حَقَّتْ عَلَيْهِمْ كَلِمَتُ رَبِّكَ لَا يُؤْمِنُوْنَ ﴿٩٦﴾

24. ಇಲ್ಲಿ ಪ್ರವಾದಿವರ್ಯರನ್ನುದ್ದೇಶಿಸಿ(ಸ) ಈ ಮಾತು ಹೇಳಲಾಗಿರುವಂತೆ ಕಂಡು ಬರುತ್ತದೆ. ವಾಸ್ತವದಲ್ಲಿ ಇದರ ಉದ್ದೇಶ ಪ್ರವಾದಿವರ್ಯರ(ಸ) ಸಂದೇಶದ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಿದ್ದ ಜನರಿಗೆ ಇದನ್ನು ಕೇಳಿಸುವುದಾಗಿದೆ. ಇಲ್ಲಿ ಗ್ರಂಥದವರ ಪ್ರಸ್ತಾಪ ಮಾಡಲಾಗಿರುವುದೇಕೆಂದರೆ- ಅರಬ್ ನಿವಾಸಿಗಳೇನೋ ದೈವಿಕ ಗ್ರಂಥಗಳ ಬಗ್ಗೆ ಜ್ಞಾನ ಇಲ್ಲದವರಾಗಿದ್ದಾರೆ. ಅವರ ಪಾಲಿಗೆ ಇದೊಂದು ಹೊಸ ಸ್ವರವಾಗಿತ್ತು. ಆದರೆ ಗ್ರಂಥದವರ ವಿದ್ವಾಂಸರ ಪೈಕಿ ಪ್ರಾಮಾಣಿಕರೂ ನ್ಯಾಯಪ್ರಿಯರೂ ಆದವರು ಈ ಬಗ್ಗೆ ಪ್ರಮಾಣ ಮಾಡಬಹುದಾಗಿತ್ತು. ಹಿಂದಿನ ಪ್ರವಾದಿಗಳೆಲ್ಲರೂ ನೀಡಿದ ಸಂದೇಶವನ್ನೇ ಈ ಕುರ್‌ಆನ್ ಕೂಡ ನೀಡುತ್ತದೆ ಎಂದು ಅವರು ದೃಢೀಕರಿಸಬಹುದಾಗಿತ್ತು.

25. ಅರ್ಥಾತ್- ಸ್ವತಃ ಸನ್ಮಾರ್ಗವನ್ನು ಬಯಸದವರಿಗೆ, ತಮ್ಮ ಹೃದಯಗಳಿಗೆ ಹಟ, ಪಕ್ಷಪಾತ ಮತ್ತು ಜಿಗುಟು ಧೋರಣೆಯ ಬೀಗ

97. ಅವರ ಮುಂದೆ ಎಂತಹ ನಿದರ್ಶನಗಳು ಬಂದರೂ ಅವರು ವೇದನಾಯುಕ್ತ ಯಾತನೆಯು ಬರುತ್ತಿರುವುದನ್ನು ಕಣ್ಣಾರೆ ಕಾಣುವ ವರೆಗೂ ವಿಶ್ವಾಸವಿರಿಸಲಾರರು.

وَلَوْ جَاءَتْهُمْ كُلُّ آيَةٍ حَتَّىٰ يَرَوُا
الْعَذَابَ الْأَلِيمَ ﴿٩٧﴾

98. ಒಂದು ನಾಡು ಯಾತನೆಯನ್ನು ಕಣ್ಣಾರೆ ಕಂಡ ಬಳಿಕ ವಿಶ್ವಾಸವಿಟ್ಟು ಅದರ ವಿಶ್ವಾಸವು ಅದಕ್ಕೆ ಫಲಕಾರಿಯಾದುದಿದೆಯೇ? ಯೂನುಸರ ಜನಾಂಗದ ಹೊರತು (ಇಂತಹ ಉದಾಹರಣೆ ಇಲ್ಲ.) ಆ ಜನಾಂಗವು ಸತ್ಯವಿಶ್ವಾಸ ಸ್ವೀಕರಿಸಿದಾಗ ನಾವು ಅದರ ಮೇಲಿಂದ ಇಹ ಜೀವನದಲ್ಲೇ ಅಪಮಾನಕಾರಕ ಯಾತನೆಯನ್ನು ನೀಗಿಸಿಬಿಟ್ಟಿದ್ದೆವು[26] ಮತ್ತು ಅದಕ್ಕೆ ಒಂದು ಕಾಲಾವಧಿವರೆಗೆ ಇಹಜೀವನದಿಂದ ಫಲ ಹೊಂದುವ ಅವಕಾಶ ಕೊಟ್ಟಿದ್ದೆವು.

فَلَوْلَا كَانَتْ قَرْيَةٌ آمَنَتْ فَنَفَعَهَا
إِيمَانُهَا إِلَّا قَوْمَ يُونُسَ لَمَّا آمَنُوا كَشَفْنَا
عَنْهُمْ عَذَابَ الْخِزْيِ فِي الْحَيَاةِ الدُّنْيَا
وَمَتَّعْنَاهُمْ إِلَىٰ حِينٍ ﴿٩٨﴾

99. (ಭೂಮಿಯಲ್ಲಿರುವವರೆಲ್ಲರೂ ಸತ್ಯವಿಶ್ವಾಸಿ ಮತ್ತು ಆಜ್ಞಾಪಾಲಕರೇ ಆಗಿರಬೇಕೆಂದು) ನಿಮ್ಮ ಪ್ರಭುವಿನ ವಿಧಿ ನಿಯಮವಿರುತ್ತಿದ್ದರೆ, ಭೂವಾಸಿಗಳೆಲ್ಲರೂ ವಿಶ್ವಾಸವಿಟ್ಟೇ ತೀರುತ್ತಿದ್ದರು. ಹೀಗಿರುವಾಗ ಜನರೆಲ್ಲರೂ ಸತ್ಯವಿಶ್ವಾಸಿಗಳಾಗಬೇಕೆಂದು ನೀವು ಒತ್ತಾಯ ಪಡಿಸುವಿರಾ?

وَلَوْ شَاءَ رَبُّكَ لَآمَنَ مَنْ فِي الْأَرْضِ
كُلُّهُمْ جَمِيعًا ۚ أَفَأَنْتَ تُكْرِهُ النَّاسَ حَتَّىٰ
يَكُونُوا مُؤْمِنِينَ ﴿٩٩﴾

100. ಯಾರೊಬ್ಬನೂ ಅಲ್ಲಾಹನ ಅನುಮತಿಯ ಹೊರತು ವಿಶ್ವಾಸವಿಡಲಾರನು. ಬುದ್ಧಿಶಕ್ತಿಯನ್ನುಪಯೋಗಿಸದವರ ಮೇಲೆ ಅಲ್ಲಾಹನು ಕೊಳೆಯನ್ನು ಹೇರುತ್ತಾನೆ.

وَمَا كَانَ لِنَفْسٍ أَنْ تُؤْمِنَ إِلَّا بِإِذْنِ
اللَّهِ ۚ وَيَجْعَلُ الرِّجْسَ عَلَى الَّذِينَ لَا يَعْقِلُونَ ﴿١٠٠﴾

101. ಭೂಮಿ ಮತ್ತು ಆಕಾಶಗಳಲ್ಲಿರುವುದನ್ನೆಲ್ಲ ಕಣ್ತೆರೆದು ನೋಡಿರೆಂದು ಇವರೊಡನೆ ಹೇಳಿರಿ. ವಿಶ್ವಾಸವಿರಿಸಿಕೊಳ್ಳಲಿಕ್ಕೇ ಇಚ್ಛಿಸದಿರುವವರಿಗೆ ದೃಷ್ಟಾಂತಗಳೂ ಎಚ್ಚರಿಕೆಗಳೂ ಏನು ಪ್ರಯೋಜನ ಕೊಟ್ಟಾವು?

قُلِ انْظُرُوا مَاذَا فِي السَّمَاوَاتِ وَالْأَرْضِ ۚ
وَمَا تُغْنِي الْآيَاتُ وَالنُّذُرُ عَنْ قَوْمٍ
لَا يُؤْمِنُونَ ﴿١٠١﴾

102. ಇವರು ಇವರಿಗಿಂತ ಮುಂಚಿನವರು ಕಂಡಿದ್ದ ದುರ್ದಿನಗಳನ್ನೇ ಕಾಣಬೇಕೆಂದು ನಿರೀಕ್ಷಿಸುತ್ತಾರಲ್ಲದೆ ಇನ್ನೇನು? "ಸರಿ,

فَهَلْ يَنْتَظِرُونَ إِلَّا مِثْلَ أَيَّامِ الَّذِينَ
خَلَوْا مِنْ قَبْلِهِمْ ۚ قُلْ فَانْتَظِرُوا إِنِّي

ಜಡಿದುಕೊಂಡಿರುವವರಿಗೆ ಮತ್ತು ಪರಲೋಕದ ಪರಿಣಾಮದ ಬಗ್ಗೆ ನಿಶ್ಚಿಂತರಾಗಿ ಲೋಕದ ವ್ಯಾಮೋಹದಲ್ಲಿ ಮೈಮರೆತಿರುವವರಿಗೆ ಎಂದೂ ಸತ್ಯವಿಶ್ವಾಸದ ಸೌಭಾಗ್ಯ ದೊರೆಯಲಾರದು ಎಂಬ ವಚನ.

26. ವ್ಯಾಖ್ಯಾನಕಾರರ ಪ್ರಕಾರ ಇದಕ್ಕೆ ಕಾರಣವೇನೆಂದರೆ ಹ. ಯೂನುಸ್(ಅ) ದೇವಯಾತನೆಯ ಬಗ್ಗೆ ಸುದ್ದಿ ಮುಟ್ಟಿಸಿದ ನಂತರ ಅಲ್ಲಾಹನ ಅನುಮತಿಯಿಲ್ಲದೆ ತಮ್ಮ ಪ್ರದೇಶವನ್ನು ಬಿಟ್ಟು ಹೊರಟು ಹೋಗಿದ್ದರು. ಅನಂತರ ಯಾತನೆಯ ಕುರುಹುಗಳನ್ನು ಕಂಡಾಗ ಅಶೂರಿಗಳು ಪಶ್ಚಾತ್ತಾಪಪಟ್ಟು ಕ್ಷಮೆ ಯಾಚಿಸತೊಡಗಿದರು. ಆಗ ಅಲ್ಲಾಹನು ಅವರನ್ನು ಕ್ಷಮಿಸಿಬಿಟ್ಟನು.

مَعَكُم مِّنَ الْمُنتَظِرِينَ ۝١٠٢

ನಿರೀಕ್ಷಿಸುತ್ತಿರಿ, ನಾನೂ ನಿಮ್ಮೊಂದಿಗೆ ನಿರೀಕ್ಷಿಸುತ್ತಿರುತ್ತೇನೆ" ಎಂದು ಇವರೊಡನೆ ಹೇಳಿರಿ.

ثُمَّ نُنَجِّي رُسُلَنَا وَالَّذِينَ آمَنُوا ۚ كَذَٰلِكَ حَقًّا عَلَيْنَا نُنجِ الْمُؤْمِنِينَ ۝١٠٣

103. ಆ ಬಳಿಕ (ಇಂತಹ ಕಾಲ ಬಂದಾಗ) ನಾವು ನಮ್ಮ ರಸೂಲರನ್ನೂ ಸತ್ಯವಿಶ್ವಾಸಿಗಳನ್ನೂ ರಕ್ಷಿಸಿಕೊಳ್ಳುತ್ತೇವೆ. ಇದೇ ನಮ್ಮ ಪದ್ಧತಿ. ಸತ್ಯವಿಶ್ವಾಸಿಗಳನ್ನು ರಕ್ಷಿಸುವುದು ನಮ್ಮ ಹೊಣೆ.

قُلْ يَا أَيُّهَا النَّاسُ إِن كُنتُمْ فِي شَكٍّ مِّن دِينِي فَلَا أَعْبُدُ الَّذِينَ تَعْبُدُونَ مِن دُونِ اللَّهِ وَلَٰكِنْ أَعْبُدُ اللَّهَ الَّذِي يَتَوَفَّاكُمْ ۖ وَأُمِرْتُ أَنْ أَكُونَ مِنَ الْمُؤْمِنِينَ ۝١٠٤

104. ಓ ಪೈಗಂಬರರೇ, ಹೇಳಿರಿ, "ಹೇ ಜನರೇ, ನೀವು ನನ್ನ ಧರ್ಮದ ಬಗೆಗೆ ಇನ್ನೂ ಸಂಶಯಗ್ರಸ್ತರಾಗಿದ್ದರೆ, ಇತ್ತ ಕೇಳಿರಿ! ನೀವು ಅಲ್ಲಾಹನ ಹೊರತು ಯಾರ ಇಬಾದತ್(ದಾಸ್ಯ-ಆರಾಧನೆ) ಮಾಡುತ್ತೀರೋ ಅವರ ದಾಸ್ಯ-ಆರಾಧನೆಯನ್ನು ನಾನು ಮಾಡುವುದಿಲ್ಲ. ಬದಲಾಗಿ, ಯಾರ ವಶದಲ್ಲಿ ನಿಮ್ಮ ಮೃತ್ಯುವಿದೆಯೋ ಆ ಅಲ್ಲಾಹನ ದಾಸ್ಯ-ಆರಾಧನೆಯನ್ನು ಮಾತ್ರ ನಾನು ಮಾಡುತ್ತೇನೆ. ನಾನು ಸತ್ಯ ವಿಶ್ವಾಸಿಗಳಲ್ಲಾಗಿರಬೇಕೆಂದು ಆಜ್ಞಾಪಿಸಲ್ಪಟ್ಟಿರುತ್ತೇನೆ.

وَأَنْ أَقِمْ وَجْهَكَ لِلدِّينِ حَنِيفًا وَلَا تَكُونَنَّ مِنَ الْمُشْرِكِينَ ۝١٠٥

105. ಮತ್ತು ಏಕಾಗ್ರಚಿತ್ತನಾಗಿ ನನ್ನನ್ನು ಧರ್ಮದಲ್ಲಿ ಸರಿಯಾಗಿ ನೆಲೆಗೊಳಿಸಿಕೊಳ್ಳಬೇಕೆಂದೂ[27] ಎಷ್ಟು ಮಾತ್ರಕ್ಕೂ 'ಬಹುದೇವವಿಶ್ವಾಸಿ'ಗಳಲ್ಲಾಗಬಾರದೆಂದೂ ನನ್ನೊಡನೆ ಹೇಳಲಾಗಿದೆ.

وَلَا تَدْعُ مِن دُونِ اللَّهِ مَا لَا يَنفَعُكَ وَلَا يَضُرُّكَ ۖ فَإِن فَعَلْتَ فَإِنَّكَ إِذًا مِّنَ الظَّالِمِينَ ۝١٠٦

106. ಅಲ್ಲಾಹನನ್ನು ಬಿಟ್ಟು, ನಿಮಗೆ ಲಾಭವನ್ನಾಗಲಿ ನಷ್ಟವನ್ನಾಗಲಿ ಉಂಟು ಮಾಡಲು ಸಮರ್ಥರಲ್ಲದ ಯಾವುದೇ ಅಸ್ತಿತ್ವವನ್ನು ಪ್ರಾರ್ಥಿಸಬೇಡಿರಿ. ನೀವು ಹಾಗೆ ಮಾಡಿದರೆ ಖಂಡಿತವಾಗಿಯೂ ಅಕ್ರಮಿಗಳಲ್ಲಾಗುವಿರಿ.

وَإِن يَمْسَسْكَ اللَّهُ بِضُرٍّ فَلَا كَاشِفَ لَهُ إِلَّا هُوَ ۖ وَإِن يُرِدْكَ بِخَيْرٍ فَلَا رَادَّ لِفَضْلِهِ ۚ يُصِيبُ بِهِ مَن يَشَاءُ

107. ಅಲ್ಲಾಹನು ನಿಮ್ಮನ್ನು ಯಾವುದಾದರೂ ಕಷ್ಟಕ್ಕೆ ಗುರಿಪಡಿಸಿದರೆ, ಸ್ವತಃ ಅವನ ಹೊರತು ಆ ಕಷ್ಟವನ್ನು ದೂರೀಕರಿಸುವವನು ಇನ್ನಾರೂ ಇಲ್ಲ ಮತ್ತು ಅವನು ನಿಮಗೆ ಹಿತವನ್ನು ಬಯಸಿದರೆ ಅವನ ಅನುಗ್ರಹವನ್ನು ತಡೆಯುವವನೂ ಯಾರೂ ಇಲ್ಲ.

27. ಮೂಲದಲ್ಲಿ 'ಅಕಿಮ್ ವಜ್‌ಹಕ ಲಿದ್ದೀನಿ ಹನೀಫಾ' ಎಂಬ ಶಬ್ದಗಳು ಉಪಯೋಗಿಸಲ್ಪಟ್ಟಿವೆ. 'ಅಕಿಮ್ ವಜ್‌ಹಕ' ಎಂಬುದರ ಶಬ್ದಾರ್ಥ 'ನಿನ್ನ ಮುಖವನ್ನು ನಾಟುವುದು' ಎಂದಾಗಿದೆ. ಇದರ ತಾತ್ಪರ್ಯವೇನೆಂದರೆ ನಿನ್ನ ದಿಕ್ಕು ಒಂದೇ ಕಡೆಗೆ ಸ್ಥಿರವಾಗಿರಬೇಕು. ಅದು ಅಲುಗಾಡುತ್ತಲೂ ಕದಲುತ್ತಲೂ ಇರಬಾರದು. ಹಿಂದೆ-ಮುಂದೆ, ಎಡ-ಬಲಗಳಿಗೆ ತಿರುಗುತ್ತಲಿರಬಾರದು. ನಿನಗೆ ತೋರಿಸಲಾಗಿರುವ ಮಾರ್ಗದಲ್ಲಿ ನಿನ್ನ ಮೂಗಿನ ನೇರಕ್ಕೆ ದೃಷ್ಟಿಯನ್ನಿಟ್ಟು ನಡೆಯುತ್ತಿರಬೇಕು. ಈ ನಿರ್ಬಂಧವೇ ಅತ್ಯಂತ ಕಟ್ಟುನಿಟ್ಟಿನದಾಗಿತ್ತು. ಆದರೂ ಅಷ್ಟಕ್ಕೇ ನಿಲ್ಲಿಸದೆ ಅದಕ್ಕೆ 'ಹನೀಫಾ' ಎಂಬ ಮತ್ತೊಂದು ನಿರ್ಬಂಧವನ್ನೂ ಹೇರಲಾಯಿತು. 'ಹನೀಫ್' ಎಂದರೆ ಎಲ್ಲದರಿಂದಲೂ ವಿಮುಖನಾಗಿ ಒಂದೇ ದಿಕ್ಕಿಗೆ ತಿರುಗುವವನಾಗಿದ್ದಾನೆ.

ಕನ್ನಡ	العربية
ಅವನು ತನ್ನ ದಾಸರ ಪೈಕಿ ತನಗಿಷ್ಟ ಬಂದವರಿಗೆ ತನ್ನ ಅನುಗ್ರಹ ಪ್ರದಾನ ಮಾಡುತ್ತಾನೆ. ಅವನು ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ.	مِنْ عِبَادِهٖ ؕ وَهُوَ الْغَفُوْرُ الرَّحِيْمُ ﴿١٠٧﴾
108. ಓ ಮುಹಮ್ಮದ್, ಹೇಳಿರಿ, "ಜನರೇ, ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಕಡೆಯಿಂದ ಪರಮ ಸತ್ಯವು ಬಂದು ಬಿಟ್ಟಿತು. ಇನ್ನು ಯಾರು ಸನ್ಮಾರ್ಗವನ್ನನುಸರಿಸುವನೋ ಅವನ ಸನ್ಮಾರ್ಗ ಪ್ರಕ್ರಿಯೆಯು ಅವನಿಗೇ ಫಲಕಾರಿಯಾಗುವುದು ಮತ್ತು ಯಾರು ಪಥಭ್ರಷ್ಟನಾಗಿರುವನೋ ಅವನ ಪಥಭ್ರಷ್ಟತೆಯು ಅವನಿಗೇ ಹಾನಿಕರವಾಗುವುದು ಮತ್ತು ನಾನು ನಿಮ್ಮ ಮೇಲೆ ಕೊತ್ವಾಲ ನೇನೂ ಅಲ್ಲ."	قُلْ يٰۤاَيُّهَا النَّاسُ قَدْ جَآءَكُمُ الْحَقُّ مِنْ رَّبِّكُمْ ۚ فَمَنِ اهْتَدٰى فَاِنَّمَا يَهْتَدِىْ لِنَفْسِهٖ ۚ وَمَنْ ضَلَّ فَاِنَّمَا يَضِلُّ عَلَيْهَا ۚ وَمَاۤ اَنَا عَلَيْكُمْ بِوَكِيْلٍ ؕ ﴿١٠٨﴾
109. ಓ ಪೈಗಂಬರರೇ, ನಿಮ್ಮ ಕಡೆಗೆ 'ದಿವ್ಯವಾಣಿ'ಯ ಮೂಲಕ ಅವತೀರ್ಣಗೊಳ್ಳುತ್ತಿರುವ ಸನ್ಮಾರ್ಗವನ್ನು ಅನುಸರಿಸುತ್ತಲೇ ಸಾಗಿರಿ ಮತ್ತು ಅಲ್ಲಾಹನು ತೀರ್ಮಾನ ಮಾಡುವ ವರೆಗೂ ತಾಳ್ಮೆವಹಿಸಿರಿ. ಅವನೇ ಅತ್ಯುತ್ತಮ ತೀರ್ಮಾನ ಮಾಡುವವನಾಗಿ ರುತ್ತಾನೆ.	وَاتَّبِعْ مَا يُوْحٰۤى اِلَيْكَ وَاصْبِرْ حَتّٰى يَحْكُمَ اللّٰهُ ۖۚ وَهُوَ خَيْرُ الْحٰكِمِيْنَ ﴿١٠٩﴾ ع ١١ ١٦